# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಫೆಬ್ರವರಿ 16, 2023

ಸಂಪುಟ : 49 ಸಂಚಿಕೆ : 275 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಲಿಂಗಾಯತರಿಗೆ 75 ಕ್ಷೇತ್ರಗಳಲ್ಲಿ 'ಬಿ' ಫಾರಂ

**ಎಸ್ಸೆಸ್ ನೇತೃತ್ವದಲ್ಲಿ ಎಐಸಿಸಿ ಸ್ಕ್ರೀನಿಂಗ್ ಕಮಿಟಿ ಅಧ್ಯಕ್ಷ ಮೋಹನ್ ಪ್ರಕಾಶ್ ಭೇಟಿ ಮಾಡಿ ಆಗ್ರಹ**

ಬೆಂಗಳೂರು, ಫೆ.15- ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ವೀರಶೈವ-ಲಿಂಗಾಯತ ಸಮುದಾಯದವರಿಗೆ ಆಯ್ದ 75 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಅನುವು ಮಾಡಿಕೊಡಬೇಕೆಂದು ಅಖಿಲ ಭಾರತ ವೀರಶೈವ- ಮಹಾಸಭಾದ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ಎಐಸಿಸಿಗೆ ಆಗ್ರಹಿಸಿದ್ದಾರೆ.

ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿಂದು ಬೆಂಗಳೂರಿನಲ್ಲಿ ಎಐಸಿಸಿ ಸ್ಕ್ರೀನಿಂಗ್ ಕಮಿಟಿಯ ಅಧ್ಯಕ್ಷ ಮೋಹನ್ ಪ್ರಕಾಶ್ ಅವರನ್ನು ಭೇಟಿ ಮಾಡಿದ ವೀರಶೈವ-ಲಿಂಗಾಯತ ಮುಖಂಡರು, ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ 75 ಕ್ಷೇತ್ರಗಳಲ್ಲಿ ಗೆದ್ದೇ ಗೆಲ್ಲುವ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ನೀಡಿದರು.

ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರ ಬೆಂಗಳೂರಿನ ನಿವಾಸದಲ್ಲಿ ವೀರಶೈವ ಲಿಂಗಾಯತ ಸಮಾಜದ ಕಾಂಗ್ರೆಸ್ ನಾಯಕರು ಎರಡು ಸುತ್ತಿನ ಸಭೆ ಮಾಡಿದರು. ಟಿಕೆಟ್ ಆಕಾಂಕ್ಷಿಗಳ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯಗಳ ಚರ್ಚೆ ನಡೆಸಿ 75 ಕ್ಷೇತ್ರಗಳಲ್ಲಿ ಗೆದ್ದೇ ಗೆಲ್ಲುವ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ರೆಡಿ ಮಾಡಿದ್ದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ, ಕೆಪಿಸಿಸಿ ಮಾಜಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ, ಮಾಜಿ ಸಚಿವರಾದ ವಿನಯ್ ಕುಲಕರ್ಣಿ, ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ್, ಮಾಜಿ ಮೇಯರ್ ಪುಟ್ಟರಾಜ್, ಅಖಿಲ ಭಾರತ ವೀರಶೈವ- ಮಹಾಸಭಾದ ಕಾರ್ಯದರ್ಶಿ ರೇಣುಕ ಪ್ರಸನ್ನ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮತ್ತಿತರರಿದ್ದರು.

# ಮಾ.1ರಿಂದ ಬಿಜೆಪಿ ರಥಯಾತ್ರೆ

**ದಣಿವರಿಯದೇ ಕೆಲಸ ಮಾಡಲು ಕಾರ್ಯಕರ್ತರಿಗೆ ಬೊಮ್ಮಾಯಿ ಕರೆ**

ಬೆಂಗಳೂರು, ಫೆ. 15 - ಮಾರ್ಚ್ 1ರಿಂದ ಬಿಜೆಪಿ ರಥಯಾತ್ರೆ ಆರಂಭವಾಗಲಿದೆ. ಇದು ಚುನಾವಣಾ ಸಮರದ ಸಮಯ. ನಾವೆಲ್ಲರೂ ದಣಿವರಿಯದೇ ಕೆಲಸ ಮಾಡಬೇಕಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಂಡಲ ಪ್ರಭಾರಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೋವಿಡ್ ನಂತರದಲ್ಲಿ ರಾಜ್ಯವು ಅತಿ ಹೆಚ್ಚು ಜಿಎಸ್‌ಟಿ ಸಂಗ್ರಹಿಸುತ್ತಿದ್ದು, ಗುರಿ ಮೀರಿ ಶೇ. 23ರಷ್ಟು ಹೆಚ್ಚು ಕಂದಾಯ ಸಂಗ್ರಹವಾಗಿದೆ. ಬಡವರ ಪರವಾಗಿ ನಮ್ಮ ನಿಲುವಿದೆ ಎಂದು ವಿವರಿಸಿದರು. ಕಮಲ ಅರಳಿಸಿ, ಅಧಿಕಾರ ಗಳಿಸುವ ಸಂಕಲ್ಪ ನಮ್ಮದಾಗಬೇಕು ಎಂದು ತಿಳಿಸಿದರು.

ಅಂಗನವಾಡಿ, ಆಶಾ ಕಾರ್ಯಕರ್ತೆಯರ ಸಮಸ್ಯೆ ಪರಿಹರಿಸಿದ್ದೇವೆ. ಪ್ರವಾಹ ಸಂತ್ರಸ್ತರಿಗೆ ಹೆಚ್ಚು ಹಣ ಅನುದಾನ ಕೊಟ್ಟಿದ್ದೇವೆ. ಸ್ಪಂದನಾಶೀಲ, ಜನಪರ ಬಿಜೆಪಿ ಸರ್ಕಾರ ರಾಜ್ಯದಲ್ಲಿದೆ ಎಂದು ವಿವರಿಸಿದರು.

# ಅಧಿಕಾರಕ್ಕೆ ಬಂದರೆ ಎಲ್ಲಾ ಟೆಂಡರ್ ರದ್ದು

**ಬಿಜೆಪಿ ಅವಧಿಯ ಹಗರಣಗಳ ತನಿಖೆಗೆ ಆಯೋಗ - ಸಿದ್ಧರಾಮಯ್ಯ**

ಬೆಂಗಳೂರು, ಫೆ. 15 - ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಹಗರಣಗಳ ತನಿಖೆಗೆ ಆಯೋಗ ರಚಿಸುವುದಲ್ಲದೆ, ಎಲ್ಲ ಟೆಂಡರ್‌ಗಳನ್ನು ರದ್ದು ಮಾಡುತ್ತೇವೆ ಎಂದು ಪಕ್ಷದ ನಾಯಕರು ಘೋಷಿಸಿದ್ದಾರೆ.

ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲಾ, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ವಿಧಾನ ಸಭಾ ಚುನಾವಣಾ ಹತ್ತಿರ ಬರುತ್ತಿದ್ದಂತೆ ರಾಜ್ಯದಲ್ಲಿ ವಸೂಲಿ ಹೆಚ್ಚಿದೆ. ಈ ಅಕ್ರಮ ಅವ್ಯವಹಾರದಲ್ಲಿ ಪಾಲುದಾರರಾಗಿರುವ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ರಾಜಕಾರಣಿಗಳನ್ನು ಸುಮ್ಮನೆ ಬಿಡುವುದಿಲ್ಲ ಎಂದರು.

ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಗೊಳಿಸುವ ಮುನ್ನವೇ ಎಲ್ಲಾ ಇಲಾಖೆಗಳಲ್ಲಿ ತರಾತುರಿಯಲ್ಲಿ ಟೆಂಡರ್ ಮಾಡುತ್ತಿದ್ದಾರೆ. ಕೆಲವು (2ನೇ ಪುಟಕ್ಕೆ)

# 'ಸ್ಮಾರ್ಟ್' ಉದ್ದೇಶ ಮರೆತು ಮುಗಿದ ಯೋಜನೆ

**ಸ್ಮಾರ್ಟ್ ಸಿಟಿಯ ಎರಡು ಯೋಜನೆಗಳು ಬಾಕಿ**

ಸ್ಮಾರ್ಟ್ ಸಿಟಿ ಯೋಜನೆಯಡಿ ದಾವಣಗೆರೆ ನಗರದಲ್ಲಿ ಒಟ್ಟು 114 ಕಾಮಗಾರಿಗಳನ್ನು ಕೈಗೊಳ್ಳಲಾಗಿತ್ತು. ಇವುಗಳಲ್ಲಿ 93 ಯೋಜನೆಗಳು ಪೂರ್ಣಗೊಂಡಿದ್ದರೆ, 21 ಕಾಮಗಾರಿ ಹಂತದಲ್ಲಿವೆ. ಆದರೆ, 98 ಕೋಟಿ ರೂ.ಗಳ ತುಂಗಭದ್ರಾ ನದಿಗೆ ಬ್ಯಾರೇಜ್ ನಿರ್ಮಾಣ ಹಾಗೂ 120 ಕೋಟಿ ರೂ.ಗಳ ಕೆ.ಎಸ್.ಆರ್.ಟಿ.ಸಿ.ಯ ಬಸ್ ನಿಲ್ದಾಣ ಕಾಮಗಾರಿಗಳು ಮಾತ್ರ ಬರುವ ಜೂನ್ ವೇಳೆಗೆ ಮುಗಿಯುವ ಲಕ್ಷಣಗಳಿಲ್ಲ. ಈ ಎರಡೂ ಯೋಜನೆಗಳಿಗೆ ಸರ್ಕಾರ ಪ್ರತ್ಯೇಕ ಮಾರ್ಗಸೂಚಿ ರೂಪಿಸಿ, ಕಾಮಗಾರಿ ಮುಗಿಸಲು ವ್ಯವಸ್ಥೆ ಮಾಡುವ ಸಾಧ್ಯತೆ ಇದೆ ಎಂದು ಸ್ಮಾರ್ಟ್ ಸಿಟಿಯ ಅಧಿಕೃತ ಮೂಲಗಳು ತಿಳಿಸಿವೆ.

ದಾವಣಗೆರೆ, ಫೆ. 15 - ದೇಶದ 100 ಸ್ಮಾರ್ಟ್ ಸಿಟಿ ಯೋಜನೆಗಳು ಈಗ ಮುಕ್ತಾಯವಾಗುವ ಹಂತಕ್ಕೆ ಬಂದಿವೆ. 22 ಸ್ಮಾರ್ಟ್ ನಗರಗಳ ಯೋಜನೆಗಳು ಮುಂದಿನ ತಿಂಗಳು ಮುಗಿಯಲಿವೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ. ಉಳಿದ ಸ್ಮಾರ್ಟ್ ನಗರಗಳ ಯೋಜನೆಗಳನ್ನೂ ಇನ್ನೂ ಮೂರ್ನಾಲ್ಕು ತಿಂಗಳ ಒಳಗೆ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ.

ಆದರೆ, ಸ್ಮಾರ್ಟ್ ಸಿಟಿ ಯೋಜನೆಗಳು ಈಡೇರಿವೆಯೇ? ಸ್ಮಾರ್ಟ್ ಸಿಟಿಯ ವೈಫಲ್ಯದ ಬಗ್ಗೆ ಯೋಚಿಸಿದರೆ, ಕೆಲಸ ಮಾಡದ ಸ್ಮಾರ್ಟ್ ಶೌಚಾಲಯಗಳು, ಓಡದ ಸೈಕಲ್‌ಗಳು, ಕೆಲಸ ಮಾಡದ ಉಚಿತ ವೈ - ಫೈ ಯೋಜನೆ... ಹೀಗೆ ಹಲವಾರು ಯೋಜನೆಗಳು ನೆನಪಿಗೆ ಬರಬಹುದು.

ಇವಾವೂ ಸ್ಮಾರ್ಟ್ ಸಿಟಿಯ ನಿಜವಾದ ವೈಫಲ್ಯಗಳಲ್ಲ. ಸ್ಮಾರ್ಟ್ ಸಿಟಿಯ ನಿಜವಾದ ವೈಫಲ್ಯ ಇರುವುದು ಕೈಗೊಂಡ ಕಾಮಗಾರಿಗಳಲ್ಲಿ ಅಲ್ಲ, ಕೈಗೊಳ್ಳದೇ ಇರುವ ಕಾಮಗಾರಿಗಳಲ್ಲಿ! ಭಾರತದ ಸ್ಮಾರ್ಟ್ ಸಿಟಿ ಯೋಜನೆಯ ಮೂಲ ಉದ್ದೇಶ, 'ನಗರಗಳನ್ನು ಸುಸ್ಥಿರ ಜೀವನಕ್ಕಾಗಿ ಸಜ್ಜುಗೊಳಿಸಲು. ಬದುಕಲು ಸೂಕ್ತವಾದ, ಸುಸ್ಥಿರ ಹಾಗೂ ಚೈತನ್ಯಯುಕ್ತ ಆರ್ಥಿಕತೆಯ ಮೂಲಕ ಜನರು ತಮ್ಮ ವೈವಿಧ್ಯ ಆಸಕ್ತಿಗಳಲ್ಲಿ ಅವಕಾಶ ಕಂಡುಕೊಳ್ಳಲು' ಎಂದು ಸ್ಮಾರ್ಟ್ ಸಿಟಿಯ ವೆಬ್ ತಾಣ ತಿಳಿಸುತ್ತದೆ. ನಗರ ಪ್ರದೇಶಗಳಲ್ಲಿ ಯೋಜನೆ ರಹಿತವಾಗಿರುವ ಪ್ರದೇಶಗಳನ್ನು ಸದ್ಬಳಕೆ ಮಾಡಿಕೊಳ್ಳುವುದು, ವಸತಿ ಸೌಲಭ್ಯ ಕಲ್ಪಿಸುವುದು, ಪಾದಚಾರಿ ಹಾಗೂ ಸೈಕಲ್ ಸವಾರರಿಗೆ ಸೂಕ್ತ ರಸ್ತೆಗಳ ನಿರ್ಮಾಣ, ನಾಗರಿಕ ಸ್ನೇಹಿ ಆಡಳಿತ ರೂಪಿಸುವುದು, ನಗರ ಪಾಲಿಕೆಗಳಿಗೆ ಅಲೆಯದೇ ಕುಳಿತಲ್ಲಿಯೇ ಆನ್‌ಲೈನ್ ಮೂಲಕ ಸೌಲಭ್ಯಗಳು ಸಿಗುವಂತೆ ಮಾಡುವುದು, ಆರೋಗ್ಯ ಹಾಗೂ ಶಿಕ್ಷಣ ರೀತಿಯ ಸೌಲಭ್ಯಗಳಿಗೆ ಉತ್ತೇಜನ ನೀಡುವುದು ಇತ್ಯಾದಿ ಇತ್ಯಾದಿ. ಅಂದ ಹಾಗೆ, ಮಂಡಕ್ಕಿ ಭಟ್ಟಿ ಪ್ರದೇಶವನ್ನು ಪುನರಭಿವೃದ್ಧಿಗೊಳಿಸುವುದೇ ಸ್ಮಾರ್ಟ್ ಯೋಜನೆಯ ಪ್ರಮುಖ ಗುರಿಯಾಗಿತ್ತು. ನಂತರ ಮಂಡಕ್ಕಿ ಭಟ್ಟಿಯನ್ನೇ ಯೋಜನೆಯಿಂದ ಕೈ (5ನೇ ಪುಟಕ್ಕೆ)

# ಜನವರಿಯಲ್ಲಿ ರಫ್ತು ಶೇ.6.58 ಇಳಿಕೆ

ನವದೆಹಲಿ, ಫೆ. 15 – ಜನವರಿಯಲ್ಲಿ ರಫ್ತು ಪ್ರಮಾಣ ಶೇ.6.58ರಷ್ಟು ಇಳಿಕೆಯಾಗಿ 32.91 ಶತಕೋಟಿ ಡಾಲರ್‌ಗಳಿಗೆ ಸೀಮಿತವಾಗಿದೆ. ಜಾಗತಿಕವಾಗಿ ಬೇಡಿಕೆ ಕುಸಿತವಾಗಿರುವುದರಿಂದ ಈ ಹಿನ್ನಡೆಯಾಗಿದೆ. ಜನವರಿಯಲ್ಲಿ ಆಮದು ಸಹ ಶೇ.3.63ರಷ್ಟು ಇಳಿಕೆಯಾಗಿದ್ದು, 50.66 ಶತಕೋಟಿ ಡಾಲರ್‌ಗಳಷ್ಟಿದೆ. ವಿನಿಮಯ ಕೊರತೆ 17.75 ಶತಕೋಟಿ ಡಾಲರ್ ಆಗಿದ್ದು, ಇದು 12 ತಿಂಗಳಲ್ಲೇ ಅತಿ ಕಡಿಮೆ.








ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ
ರಥೋತ್ಸವಕ್ಕೆ
ಆಗಮಿಸುತ್ತಿರುವ ಕೊಟ್ಟೂರು ಮತ್ತು ರಾಜ್ಯದ ಸಕಲ ಭಕ್ತಾದಿಗಳಿಗೆ
ಭಕ್ತಿಪೂರ್ವಕ ಸ್ವಾಗತ
ಇಂತಿ ನಿಮ್ಮ ಸೇವಾಕಾಂಕ್ಷಿ
ಜಯಪ್ರಕಾಶ್ ಎಲ್.
(ಜೆ.ಪಿ. ಲಿಂಗದಹಳ್ಳಿ)
ರಿಯಲ್ ಎಸ್ಟೇಟ್ ಉದ್ಯಮಿ
ವಧು-ವರರ ಅನ್ವೇಷಣಾ ಕೇಂದ್ರ, ದಾವಣಗೆರೆ.
ಫೋ. : 73380 25776
ವಿಶೇಷ ಸೂಚನೆ : ಸರ್ವ ಭಕ್ತಾದಿಗಳಿಗೆ ಉಪಹಾರದ ವ್ಯವಸ್ಥೆ ಇರುತ್ತದೆ.







॥ ಶ್ರೀ ಜಂಭುನಾಥ ಪ್ರಸನ್ನ ॥ ॥ ಶ್ರೀ ರೇಣುಕಾಂಬ ಪ್ರಸನ್ನ ॥
ಕೈಲಾಸ ಶಿವಗಣಾರಾಧನೆ ಆಹ್ವಾನ
ಶ್ರೀಮತಿ ಅನುರಾಧ ಮತ್ತು ಶ್ರೀ ಬಿ.ಪಿ. ಹರೀಶ್, ಮಾಜಿ ಶಾಸಕರು, ಹರಿಹರ ಕ್ಷೇತ್ರ
ಮತ್ತು ಸಹೋದರರು
ಪಿ.ಜೆ. ಬಡಾವಣೆ, ದಾವಣಗೆರೆ ಇವರುಗಳು ಮಾಡುವ ವಿಜ್ಞಾಪನೆಗಳು.
ದಿನಾಂಕ 04-02-2023ನೇ ಶನಿವಾರ ಬೆಳಿಗ್ಗೆ 10.20 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ





ಜನನ : 01-01-1943
ಮರಣ : 04-02-2023
ಶ್ರೀಮತಿ ಕಮಲಮ್ಮನವರು
(ಹರಿಹರ ಕ್ಷೇತ್ರದ ಮಾಜಿ ಶಾಸಕರಾದ ದಿ. ಬೂದಿಹಾಳ್ ಬಸವನಗೌಡರ ಧರ್ಮಪತ್ನಿ)
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 16-02-2023ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ತೊಗಟವೀರ ಕಲ್ಯಾಣ ಮಂಟಪ,
ಎಂಸಿಸಿ 'ಎ' ಬ್ಲಾಕ್, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ
ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ಅನುರಾಧ ಮತ್ತು ಶ್ರೀ ಬಿ.ಪಿ. ಹರೀಶ್, ಮಾಜಿ ಶಾಸಕರು, ಹರಿಹರ ಕ್ಷೇತ್ರ
ಶ್ರೀಮತಿ ಲತಾ ಮತ್ತು ಡಾ. ಪ್ರಭು ಬಿ. ಪ್ರೊಫೆಸರ್, ಕೀಲುಮೂಳೆ ವಿಭಾಗ, ಜಜಮು ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ.
ಶ್ರೀಮತಿ ಮಧು ಮತ್ತು ಶ್ರೀ ಸುರೇಶ್ ಬಿ.ಪಿ. ವರ್ತಕರು, ದಾವಣಗೆರೆ.
ಶ್ರೀಮತಿ ರೇಣುಕಾ ಮತ್ತು ಶ್ರೀ ಮಹಾದೇವ ಗಾಂಧಿ, ಬೆಂಗಳೂರು
ಶ್ರೀಮತಿ ಗೌರಮ್ಮ ಮತ್ತು ಶ್ರೀ ನಾಗರಾಜಪ್ಪ ಮತ್ತು ಸಹೋದರರು, ಸಹೋದರಿಯರು, ಅರಕೆರೆ, ಹೊನ್ನಾಳಿ ತಾ.
ಬೂದಿಹಾಳ್ ಗೌಡ್ರು ವಂಶಸ್ಥರು ಹಾಗೂ ಗ್ರಾಮಸ್ಥರು, ಬೂದಿಹಾಳ್.
ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.


# ಕಾಶಿ ಹಿಂದೂ ವಿವಿಯಲ್ಲಿ ತರಳಬಾಳು ಶ್ರೀ ಉಪನ್ಯಾಸ



ದಾವಣಗೆರೆ, ಫೆ. 15 – ವಾರಣಾಸಿಯ ಕಾಶಿ ಹಿಂದೂ ವಿಶ್ವವಿದ್ಯಾಲಯದಲ್ಲಿ ಫೆ.17ರ ಶುಕ್ರವಾರದಂದು ತರಳಬಾಳು ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಸಂಶೋಧಕ ರಾಜಪೋಪಟ್ ಅವರು ಪಾಣಿನಿಯ ಸೂತ್ರಗಳಿಗೆ ಸಂಬಂಧಿಸಿದಂತೆ ಸೃಷ್ಟಿಸಿರುವ ವಿವಾದದ ಹಿನ್ನೆಲೆಯಲ್ಲಿ ಈ ವಿಶೇಷ ಉಪನ್ಯಾಸವನ್ನು ಆಯೋಜಿಸಲಾಗಿದೆ. ಉಪನ್ಯಾಸದಲ್ಲಿ ಸಂಸ್ಕೃತ ಭಾಷೆ ಹಾಗೂ ವ್ಯಾಕರಣ ತಜ್ಞರು, ಕಂಪ್ಯೂಟರ್ ಸೈನ್ಸ್ ಹಾಗೂ ಗಣಿತದ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

# ಸಹಕಾರ ಕ್ಷೇತ್ರ : 2 ಲಕ್ಷ ಪಿ.ಎ.ಸಿ. ಸ್ಥಾಪನೆಗೆ ಸಂಪುಟದ ಸಮ್ಮತಿ

ನವದೆಹಲಿ, ಫೆ. 15 – ಸಹಕಾರ ಕ್ಷೇತ್ರಕ್ಕೆ ಮತ್ತಷ್ಟು ಬಲ ನೀಡಲು 2 ಲಕ್ಷ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು (ಪಿ.ಎ.ಸಿ.) ಹಾಗೂ ಹೈನುಗಾರಿಕೆ - ಮೀನುಗಾರಿಕೆ ಸಹಕಾರಿಗಳನ್ನು ಸ್ಥಾಪಿಸಲು ಕೇಂದ್ರ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಇದುವರೆಗೂ ಸಹಕಾರಿಗಳು ಇಲ್ಲದಿರುವ ಗ್ರಾಮಗಳು ಹಾಗೂ ಪಂಚಾಯ್ತಿಗಳಲ್ಲಿ ಮುಂದಿನ ಐದು ವರ್ಷಗಳಲ್ಲಿ ಈ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಪ್ರಸಕ್ತ ದೇಶದಲ್ಲಿ 63 ಸಾವಿರ ಪಿ.ಎ.ಸಿ.ಗಳು ಕಾರ್ಯ ನಿರ್ವಹಿಸುತ್ತಿವೆ.

# ದೇಶಿ ಉದ್ಯಮಗಳಿಂದ ಶೇ.75ರ ಖರೀದಿ

**ರಕ್ಷಣಾ ಸಚಿವ ರಾಜನಾಥ್ ಸಿಂಗ್**

ಬೆಂಗಳೂರು, ಫೆ. 17- ರಕ್ಷಣಾ ಬಂಡವಾಳ ವೆಚ್ಚದ ಶೇ.75ರಷ್ಟನ್ನು ದೇಶೀಯ ಉತ್ಪಾದಕರಿಂದ ಖರೀದಿಗೆ ಬಳಸಲಾಗುವುದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ಸರ್ಕಾರದ ಈ ನಿರ್ಧಾರದಿಂದ ದೇಶೀಯ ಉತ್ಪಾದನೆಗೆ ಉತ್ತೇಜನ ಸಿಗಲಿದೆ.

ಸರ್ಕಾರದ ಕ್ರಮದಿಂದಾಗಿ ಒಂದು ಲಕ್ಷ ಕೋಟಿ ರೂ. ಹಣ ದೇಶೀಯ ಉದ್ಯಮಗಳಿಗೆ ಸಿಗಲಿದೆ. ಸರ್ಕಾರ ರಕ್ಷಣಾ ಬಂಡವಾಳ ವೆಚ್ಚಕ್ಕಾಗಿ 1.62 ಲಕ್ಷ ಕೋಟಿ ರೂ. ನೀಡುವುದಾಗಿ ಘೋಷಿಸಿದೆ. ಏರೋ ಇಂಡಿಯಾ ಶೋದಲ್ಲಿ ಮಾತ ನಾಡಿರುವ ರಾಜನಾಥ್ ಸಿಂಗ್, ನೀವು ಒಂದು ಹೆಜ್ಜೆ ಮುಂದಿಟ್ಟರೆ ಸರ್ಕಾರ ಹತ್ತು ಹೆಜ್ಜೆ ಮುಂದಿಡಲಿದೆ. (2ನೇ ಪುಟಕ್ಕೆ)




ಪುಣ್ಯಸ್ಮರಣೆ
ಲಿಂ॥ ಎಂ.ಜಿ. ಬಕ್ಕೇಶ್
ಮಾಜಿ ಮೇಯರ್, ಮಹಾನಗರ ಪಾಲಿಕೆ, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು,
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ
ಸಹೋದರರು : ಎಂ.ಜಿ. ರಾಜಣ್ಣ, ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಬಿ. ಅನಿತಾ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.
ಉಮಾ ಟ್ರೇಡರ್ಸ್,
ದಾವಣಗೆರೆ, ಚಿತ್ರದುರ್ಗ.
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.

**ಸೈಟು, ನೆಲ ಬಾಡಿಗೆಗೆ ಇದೆ**
ಸೈಟ್ ಅಳತೆ 44x60 = 2640 ಸ್ಕೇರ್‌ಫೂಟ್. ಪ್ಲಾಟ್ ನಂ.6, ನೂತನ ಕಾಲೇಜ್ ಮೇನ್ ರೋಡ್ ಬಸವೇಶ್ವರ ಸರ್ವೀಸ್ ಸೆಂಟರ್ ಪಕ್ಕ, ದಾವಣಗೆರೆ.
ಸಂಪರ್ಕಿಸಬೇಕಾದ ಮೊಬೈಲ್ ನಂ.
81056 01900, 63627 53030

**ಮನೆಗಳು ಬಾಡಿಗೆಗೆ/ ಲೀಜ್‌ಗೆ ಇವೆ**
* ಸಿಂಗಲ್ ಬೆಡ್ ರೂಂ * ಡಬಲ್ ಬೆಡ್ ರೂಂ, * ಮೂರು ಬೆಡ್ ರೂಂ ಮನೆಗಳು ವಿದ್ಯಾನಗರ ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರಿನ ಪಾರ್ಕ್ ಪಕ್ಕದಲ್ಲಿ 20x30 ಅಳತೆಯಲ್ಲಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
98442 94446

**ಸೈಟುಗಳು ಮಾರಾಟಕ್ಕಿವೆ**
ಹಳೇ ಕುಂದುವಾಡ ಪಶ್ಚಿಮ 30x50, ಪೂರ್ವ-ದಕ್ಷಿಣ ಕಾರ್ನರ್ 25x45, ಹೊಸ ಕುಂದುವಾಡ ಪೂರ್ವ 30x50, 30x40, ಸರ್ಕಾರಿ ನೌಕರರ ಬಡಾವಣೆ ಉತ್ತರ 30x36.
ಐಗೂರು ವಿಜಯಕುಮಾರ
99457 02495

**ಮನೆ ಲೀಸ್‌ಗೆ**
#1846/178 ಗ್ರೌಂಡ್ ಫ್ಲೋರ್, 2 BHK, ಕಾರ್ನರ್ ಮನೆ, ವಿನಾಯಕ ಬಡಾವಣೆ, ವಿದ್ಯಾನಗರ, ಸೌಜನ್ಯ ಪಾರ್ಕ್ ಹತ್ತಿರ, ಲೀಸ್‌ಗೆ ಇದೆ.
ಫೋ. : 98864 11116

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**EC / ಇಸಿ, E-swathu & Khatha Change Building Licence**
Call :
96118-66449

**WANTED**
Librarian cum Receptionist - 01
DTP Operator -01,
Office Boy - 01
WINNERS CAREER ACADEMY,
Davangere
98869 97892, 91485 96892

**ಕೆಲಸಕ್ಕೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಶ್ರೀ ರಾಜೇಂದ್ರ ಗಾರ್ಮೆಂಟ್ಸ್
ಬೆಳ್ಳೂಡಿ ಗಲ್ಲಿ ಕ್ರಾಸ್, ಎ.ಎಂ.ರಸ್ತೆ, ದಾವಣಗೆರೆ - 577001
ಮೊ : 94481-14261

**ಬೇಕಾಗಿದ್ದಾರೆ**
ಹೋಟೆಲ್ ಅಥವಾ ಕೆಫೆಯಲ್ಲಿ ಕೆಲಸ ಮಾಡಿದ ಅನುಭವವಿರುವ ಯುವಕರು ಬೇಕಾಗಿದ್ದಾರೆ. ಸಂಬಳ ಹಾಗೂ ಪ್ರೋತ್ಸಾಹ ಧನ ಹಾಗೂ ವಸತಿ ಇರುತ್ತದೆ.
98445 67456

**WANTED**
Civil Engineers
Only for Ladies
Contact :
Ph. : 80880 50729
74060 21863

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ 40x50 (ಪೂರ್ವ -ಉತ್ತರ ಕಾರ್ನರ್) 60x30 ಕಮರ್ಷಿಯಲ್ 40x60 ಪೂರ್ವ 30x40 ಪಶ್ಚಿಮ
95385 65909

**ಬೇಕಾಗಿದ್ದಾರೆ**
1) ಕ್ಯಾಷಿಯರ್ - ಮಹಿಳೆಯರು (2-3 ವರ್ಷ ಅನುಭವವುಳ್ಳವರು) ಬಿ.ಕಾಂ/ ಎಂ.ಕಾಂ
2) ಸೇಲ್ಸ್ ಬಾಯ್ಸ್ / ಗರ್ಲ್ಸ್ ಅನುಭವವುಳ್ಳವರು
3) ಕ್ಲೀನಿಂಗ್ ಮಾಡಲು ಮಹಿಳೆಯರು
ಪರಸ್ಥಳದವರಿಗೆ ಉಚಿತ ಊಟ, ವಸತಿ ಸೌಲಭ್ಯ ಕಲ್ಪಿಸಲಾಗುವುದು ಸಂಪರ್ಕಿಸಿ
ಶರಭೇಶ್ವರ ಫುಡ್ ಪ್ರಾಡಕ್ಟ್ಸ್ ಮತ್ತು ಹೋಟೆಲ್
94489 80070, 88847 04025

**ಚಿಕ್ಕ ಮನೆಗಳು ಬಾಡಿಗೆಗೆ**
ಶಕ್ತಿ ನಗರದಲ್ಲಿ ಚಿಕ್ಕ ಮನೆಗಳು ಬಾಡಿಗೆಗೆ ದೊರೆಯುತ್ತವೆ.
94484 39639

**ಹೊಸ ಮನೆ ಮಾರಾಟಕ್ಕಿದೆ**
30x40 ರಲ್ಲಿ 6 ಪೋರ್ಷನ್ ಇರುವ 3 ಅಂತಸ್ತಿನ ಮನೆ ಮಾರಾಟಕ್ಕಿದೆ.
ಸ್ಥಳ : ಆನಗೋಡು ಪೆಟ್ರೋಲ್ ಬಂಕ್ ಹಿಂಭಾಗ
89705 67143
89711 92936

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್
2) ಮೆಡಿಕಲ್ ಶಾಪ್ಸ್ ಆರ್ಡರ್ ಬುಕ್ಕಿಂಗ್ ಬಾಯ್ಸ್
3)B.com account with computer (Married Ladies preference) Experience 5 years
ಎ.ಕೆ.ಟ್ರೇಡರ್ಸ್,
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ- 577004

**AUDITION**
ಕಿರುಚಿತ್ರ, ಸರಣಿ ಕಿರುಚಿತ್ರ, ಧಾರಾವಾಹಿ, ಚಲನಚಿತ್ರ ಹೀರೋ, ಹಿರೋಯಿನ್ಸ್, ಕಲಾವಿದರು
89716 53672
76769 43244

**WANTED**
Banking Sector tele caller (Female Only)
Qualification : Any Degree.
No. 2257/5 2nd Floor, MCC `A' Block
Beside Togataveera Kalyana Mantapa
81237 63199
Interview time : 11AM

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷ ವಯಸ್ಸಿನ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ**
ಅಲರ್ಟ್ ಸೆಕ್ಯೂರಿಟಿ ಡಿಟೆಕ್ಟಿವ್ ಫೋರ್ಸ್ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮ ವೇತನ ಹಾಗೂ ಇಎಸ್‌ಐ ಮತ್ತು ಪಿ.ಎಫ್ ಸೌಲಭ್ಯ ಇರುತ್ತದೆ.
ವಿಳಾಸ : ಶಿವಪ್ಪ ಸರ್ಕಲ್ , 8ನೇ ಕ್ರಾಸ್, ನಿಟ್ಟುವಳ್ಳಿ ಮೇನ್ ರೋಡ್, ದಾವಣಗೆರೆ.
70012 87756, 95351 56531, 97409 77785

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕಿನಲ್ಲಿ ಹಿಟ್ಟಿನ ಗಿರಣಿ ನಡೆಸಲು & ತೋಟ ನೋಡಿಕೊಳ್ಳಲು ಒಂದು ಕುಟುಂಬ ಬೇಕಾಗಿದೆ. ಅನುಭವವಿದ್ದವರಿಗೆ ಆದ್ಯತೆ.
94484 39639

**WANTED**
Relationship Manager
20,000 to 35000
Reliance Nippon Life Insurance
Davanagere.
Any Degree, Age : 25 to 40.
Interested Candidate send your resume to the whatsapp
98804 63451
Prakash Naik : Teritory Manager

**ಬೇಕಾಗಿದ್ದಾರೆ**
ಎಂಸಿಸಿ 'ಎ' ಬ್ಲಾಕ್ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
99729 11344

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕೆ ಇವೆ**
ಮಹಾಲಕ್ಷ್ಮಿ 40x30 ಪೂರ್ವ, ಕುಂದವಾಡ ಕೆರೆ ಪಕ್ಕದಲ್ಲಿ 30x45 ಪಶ್ಚಿಮ, ನಿಜಲಿಂಗಪ್ಪ ಬಡಾವಣೆ 40x60 ದಕ್ಷಿಣ, ಬಸವೇಶ್ವರ 50x60 ದಕ್ಷಿಣ.
ಏಜೆಂಟರು, ಯಲ್ಲೋಜಿರಾವ್. ಎಸ್
97418 11694


# ರಾಜ್ಯಗಳು ಒಪ್ಪಿದರೆ ಪೆಟ್ರೋಲ್ ಜಿ.ಎಸ್.ಟಿ.ಗೆ

ನವದೆಹಲಿ, ಫೆ. 15 – ರಾಜ್ಯಗಳು ಒಪ್ಪಿದರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರಬಹುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಪೆಟ್ರೋಲಿಯಂ ಉತ್ಪನ್ನಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರಲು ಈಗಾಗಲೇ ಅವಕಾಶಗಳಿವೆ. ನನ್ನ ಹಿಂದಿನ ಸಚಿವರು ಈ ಕುರಿತ ಬಾಗಿಲನ್ನು ತೆರೆದಿಟ್ಟಿದ್ದಾರೆ ಎಂದು ಸಚಿವೆ ಸೀತಾರಾಮನ್ ಹೇಳಿದರು.

ಕಚ್ಚಾ ಪೆಟ್ರೋಲಿಯಂ, ಪೆಟ್ರೋಲ್, ಹೈ ಸ್ಪೀಡ್ ಡೀಸೆಲ್, ನೈಸರ್ಗಿಕ ಅನಿಲ ಹಾಗೂ ವೈಮಾನಿಕ ಇಂಧನಗಳನ್ನು ತಾತ್ಕಾಲಿಕವಾಗಿ ಜಿ.ಎಸ್.ಟಿ. ವ್ಯಾಪ್ತಿಯಿಂದ ಹೊರಗಿಡಲಾಗಿದೆ. ಇವುಗಳನ್ನು ಜಿ.ಎಸ್.ಟಿ. ವ್ಯಾಪ್ತಿಗೆ ತರುವ ಬಗ್ಗೆ ಜಿ.ಎಸ್.ಟಿ. ಮಂಡಳಿ ನಿರ್ಧರಿಸಬೇಕಿದೆ.

# ಕೊಟ್ಟೂರು ಭಕ್ತರ ಸಂಖ್ಯೆ ಹೆಚ್ಚಳಕ್ಕೆ ಧರ್ಮದ ಮೇಲಿಟ್ಟಿರುವ ನಂಬಿಕೆಯೇ ಕಾರಣ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಆರ್ಯವೈಶ್ಯ ಸಮಾಜದ ಅಧ್ಯಕ್ಷ ಮುದುಗಲ್ ನಾಗರಾಜ ಶೆಟ್ರು ವಿಶ್ಲೇಷಣೆ

ಹರಪನಹಳ್ಳಿ, ಫೆ.15 - ಕೊಟ್ಟೂರು ರಥೋತ್ಸವಕ್ಕೆ ತೆರಳುವ ಭಕ್ತಾದಿಗಳ ಸಂಖ್ಯೆ ಹೆಚ್ಚಳಕ್ಕೆ ಜನರು ಧರ್ಮದ ಮೇಲೆ ಇಟ್ಟಿರುವ ನಂಬಿಕೆಯೇ ಕಾರಣ ಎಂದು ಆರ್ಯವೈಶ್ಯ ಸಮಾಜದ ಅಧ್ಯಕ್ಷ ಮುದುಗಲ್ ನಾಗರಾಜ ಶೆಟ್ರು ಹೇಳಿದರು.



ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಆರ್ಯವೈಶ್ಯ ಮಂಡಳಿ ವತಿಯಿಂದ ಕೊಟ್ಟೂರು ಗುರು ಬಸವೇಶ್ವರ ರಥೋತ್ಸವಕ್ಕೆ ತೆರಳುವ ಪಾದಯಾತ್ರಿಗಳಿಗೆ ಔಷಧೋಪಚಾರ, ಹಣ್ಣು, ಉಪಹಾರ, ಊಟ, ಹೀಗೆ ವಿವಿಧ ಸೌಲಭ್ಯಗಳನ್ನು ನೀಡುವ ಮೂಲಕ ಭಕ್ತಿ ಸಮರ್ಪಿಸಿ ಮಾತನಾಡಿದರು.

ಮನುಷ್ಯ ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದರು ದೇವರ ಬಗ್ಗೆ ಇರುವ ನಂಬಿಕೆ, ಭಕ್ತಿ ಕಡಿಮೆಯಾಗಿಲ್ಲ. ಭಕ್ತರು ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ದೂರದ ಊರುಗಳಿಂದ ಆಗಮಿಸಿದ್ದ ಭಕ್ತರಿಗೆ ವೈದ್ಯರ ಮೂಲಕ ವಿವಿಧ ಔಷಧೋಪಚಾರ ನಡೆಸಲಾಯಿತು.

ಬೆಳಿಗ್ಗೆ ಉಪಹಾರ, ಮಧ್ಯಾಹ್ನ ವಿವಿಧ ಹಣ್ಣುಗಳು, ತಂಪು ಪಾನೀಯಗಳನ್ನು ನೀಡಲಾಯಿತು. ಸಂಜೆ ದಾಸೋಹದ ವ್ಯವಸ್ಥೆ ಕಲ್ಪಿಸಲಾಗಿತ್ತು.

ಆರ್ಯವೈಶ್ಯ ಮಂಡಳಿ ಸಂಘದಿಂದ ಭಕ್ತರಿಗೆ ಉಪಚರಿಸುವ ಮೂಲಕ ಗುರುಬಸವೇಶ್ವರ ಸ್ವಾಮಿಗೆ ಭಕ್ತಿಯನ್ನು ಸಮರ್ಪಿಸಿದರು.

ಆರ್ಯವೈಶ್ಯ ಸಮಾಜದ ಅಧ್ಯಕ್ಷ ಮುದುಗಲ್ ನಾಗರಾಜ ಶೆಟ್ರು, ಉಪಾಧ್ಯಕ್ಷ ಬಿ. ಎಸ್.ರವಿಶಂಕರ್, ನಟೇಶ್‌ಕುಮಾರ, ಉಪ ಕಾರ್ಯದರ್ಶಿ ಕಡ್ಲಿ ನಟರಾಜ, ಖಜಾಂಚಿ ಪೆಂಡಕೂರು ಶ್ರೀಧರ, ಕಡ್ಲಿ ರಾಘವೇಂದ್ರ ಶೆಟ್ಟಿ, ಹೆಚ್.ಕೆ.ಬದರಿನಾರಾಯಣ, ಗಂಗಾವತಿ ಕಿಟ್ಟಣ್ಣ, ಭೀಮಪ್ಪ ಶೆಟ್ರು, ಬಂಕಾಪುರ ಸತೀಶ, ಗಂಗಾವತಿ ಮನೋಹರ, ಕೃಷ್ಣ ಮುದುಗಲ್, ನಾಗಾನಂದ ಮುದುಗಲ್, ಪಿ.ಮುರುಳಿ, ಅರವಿಂದ ಕೋಡಿಹಳ್ಳಿ, ಭಾಸ್ಕರ್ ಶೆಟ್ರು, ಎಸ್.ಶಂಕರ್, ವಿನಾಯಕ ಹುಬ್ಬಳ್ಳಿ, ಗುರುಪ್ರಸಾದ್ ಕಾಂಬ್ಳೆ, ಮಧುಸೂದನ್ ಬಂಕಾಪುರ, ಪಿ.ಎನ್. ರಾಜೇಂದ್ರ ಕುಮಾರ, ಪೆಂಡಕೂರ್ ಮುರುಳಿ ಮಹಿಳಾ ಅಧ್ಯಕ್ಷರಾದ ಎಂ.ಸುಜಾತ, ಕಾರ್ಯದರ್ಶಿ ಸವಿತ, ಖಜಾಂಚಿ ಪಿ.ಎಂ.ಸೌಮ್ಯ, ನಿರ್ದೇಶಕರುಗಳಾದ ಪಿ.ಎಸ್.ಶ್ವೇತಾ, ಜಿ. ಗಾಯತ್ರಿ, ಬಿ. ಜಯಶ್ರೀ, ಜಿ.ಪಲ್ಲವಿ, ಎಚ್. ಗಿರಿಜಾ, ಕೆ.ನಳಿನಿ, ಭಾಗ್ಯ, ಬಿ. ಎಂ. ಶಾರದ, ಜೆ. ರಂಜಿತಾ, ಕೆ.ರಜನಿ, ಪದ್ಮಾನಟೇಶ್, ಸಿಂಧು ಸೇರಿದಂತೆ ಇತರರು ಇದ್ದರು.

# ಹರಿಹರದಲ್ಲಿ ಇಂದು ಮಾದಾರ ಚನ್ನಯ್ಯ ಜಯಂತಿ

ಹರಿಹರ, ಫೆ. 15 - ನಗರದ ಮಾದಿಗ ಸಮಾಜದ ವತಿಯಿಂದ ನಾಳೆ ದಿನಾಂಕ 16 ರ ಗುರುವಾರ ಬೆಳಗ್ಗೆ 11 ಗಂಟೆಗೆ ಮಾದಾರ ಚನ್ನಯ್ಯ ಜಯಂತ್ಯೋತ್ಸವದ ಅಂಗವಾಗಿ ಜನ ಜಾಗೃತಿ ಸಮಾವೇಶ ಹಾಗೂ ಸರಳ ಸಾಮೂಹಿಕ ವಿವಾಹ ಮಹೋತ್ಸವ ಸಮಾರಂಭವನ್ನು ನಗರದ ಭಾಗೀರಥಿ ಕಲ್ಯಾಣ ಮಂಟಪ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿದೆ ಎಂದು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದಕುಮಾರ್ ತಿಳಿಸಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಸಮಾರಂಭದ ದಿವ್ಯಸಾನ್ನಿಧ್ಯವನ್ನು ಹಿರಿಯೂರು ತಾಲ್ಲೂಕು ಕೋಡಿಹಳ್ಳಿ ಮಠದ ಶ್ರೀ ಷಡಕ್ಷರಮುನಿ ದೇಶೀಕೇಂದ್ರ ಮಹಾಸ್ವಾಮಿಗಳು ಹಾಗೂ ಮೊಳಕಾಲ್ಮೂರು ತಾಲ್ಲೂಕು ಸಿದ್ದಯ್ಯನಕೋಟೆ ಶ್ರೀ ಬಸವಲಿಂಗ ಮಹಾಸ್ವಾಮಿಗಳು ಚಿತ್ತರಗಿ ಸಾನ್ನಿಧ್ಯ ವಹಿಸಲಿದ್ದಾರೆ.

ಅಧ್ಯಕ್ಷತೆಯನ್ನು ತಾಲ್ಲೂಕು ಮಾದಿಗ ಸಮಾಜದ ಅಧ್ಯಕ್ಷ ಎಂ.ಎಸ್. ಆನಂದ್ ವಹಿಸಲಿದ್ದು, ಉದ್ಘಾಟನೆ ಮಾಜಿ ಸಚಿವರಾದ ಹೆಚ್. ಆಂಜನೇಯ ಮಾಡಲಿದ್ದಾರೆ. ಪ್ರಾಸ್ತಾವಿಕವಾಗಿ ಸಮಾಜದ ಗೌರವಾಧ್ಯಕ್ಷ ಎಂ.ಬಿ. ಅಣ್ಣಪ್ಪ ಮಾತನಾಡುವರು. ಉಪನ್ಯಾಸವನ್ನು ಪ್ರಾಧ್ಯಾಪಕ ಶಿವಾನಂದ ಕೆಳಗಿನಮನೆ ಮಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕ ಎಸ್ ರಾಮಪ್ಪ, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಜಿಪಂ ಮಾಜಿ ಅಧ್ಯಕ್ಷ ಎ. ಗೋವಿಂದ ರಡ್ಡಿ, ದಾವಣಗೆರೆ ಮಹಾನಗರಪಾಲಿಕೆ ಸದಸ್ಯ ಬಿ.ಜಿ. ಅಜಯ್ ಕುಮಾರ್, ಡಾ ಹೆಚ್. ವಿಶ್ವನಾಥ್ ಮತ್ತಿತರರು ಆಗಮಿಸುತ್ತಾರೆ.

ಸಮಾಜದ ನಗರಸಭೆಯ ಸದಸ್ಯರಾದ ಎನ್. ರಜನಿಕಾಂತ್, ಪಿ.ಎನ್. ವೀರುಪಾಕ್ಷಪ್ಪ, ಆಟೋ ಹನುಮಂತಪ್ಪ, ಸುಮಿತ್ರಮ್ಮ ಮರಿದೇವ, ಸುರೇಶ್ ತೇರದಾಳ, ಸಾರಥಿ ಗ್ರಾಪಂ ಅಧ್ಯಕ್ಷೆ ಪುಷ್ಪಾ ಹನುಮಂತಪ್ಪ, ಉಕ್ಕಡಗಾತ್ರಿ ಗ್ರಾಪಂ ಅಧ್ಯಕ್ಷೆ ಕರಿಬಸಮ್ಮ ಬಸಪ್ಪ, ವಾಸನ ಗ್ರಾಪಂ ಅಧ್ಯಕ್ಷ ಹಳದಪ್ಪ ಗದಿಗೆಪ್ಪ, ದೇವರಬೆಳಕೇರಿ ಗ್ರಾಪಂ ಅಧ್ಯಕ್ಷ ಜಗದೀಶ್ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕರಿಸಲಾಗುವುದು.

ಈ ಸಂದರ್ಭದಲ್ಲಿ ಮಾದಿಗ ಸಮಾಜದ ಗೌರವಾಧ್ಯಕ್ಷ ಎಂ.ಬಿ. ಅಣ್ಣಪ್ಪ, ಕಾರ್ಯಾಧ್ಯಕ್ಷ ಎ.ಕೆ. ಶಿವರಾಮ ಬೇವಿನಹಳ್ಳಿ, ನಗರಸಭೆ ಸದಸ್ಯ ಪಿ.ಎನ್. ವಿರುಪಾಕ್ಷಪ್ಪ, ಉಪಾಧ್ಯಕ್ಷ ಎಂ.ಎಸ್. ಶ್ರೀನಿವಾಸ್, ಬಿ.ಡಿ. ಬಸವರಾಜ್ ಕೊಕ್ಕನೂರು, ಹಳ್ಳಿಹಾಳ ಹನುಮಂತಪ್ಪ ದೊಡ್ಡಮನೆ ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಸಂತ ಸಮಾರಾಧನೆ

ದಾವಣಗೆರೆ ಸಿಟಿ ಭಾವಸಾರ ಕ್ಷತ್ರಿಯ ದೈವ ಮಂಡಳಿ ವತಿಯಿಂದ ಶ್ರೀ ವಿಠೋಬ ದೇವರ ದಿಂಡಿ ಉತ್ಸವದ ಅಂಗವಾಗಿ ಇಂದು ಮಧ್ಯಾಹ್ನ 1 ಗಂಟೆಗೆ ವಸಂತ ರಸ್ತೆಯಲ್ಲಿರುವ ಶ್ರೀಮತಿ ಅಂಬಾಬಾಯಿ ನವಲೆ ಬಸವಣ್ಣಪ್ಪ ಕಲ್ಯಾಣ ಮಂಟಪದಲ್ಲಿ ಶ್ರೀ ಸಂತ ಸಮಾರಾಧನೆ ನಡೆಯಲಿದೆ. ಬೆಳಿಗ್ಗೆ 5 ಕ್ಕೆ ಕಾಕಡಾರತಿ, ಬೆಳಿಗ್ಗೆ 9 ಕ್ಕೆ ದಿಂಡಿ ಉತ್ಸವ ನಗರ ಪ್ರದಕ್ಷಿಣೆ ಹೊರಡುವುದು. ಉತ್ಸವ ವಾಪಾಸ್ ಬಂದ ನಂತರ ಸಂತ ಪೂಜಾ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ನಂತರ ಮಧ್ಯಾಹ್ನ 1 ಕ್ಕೆ ಶ್ರೀ ಸಂತ ಸಮಾರಾಧನೆ ನಡೆಯಲಿದೆ.

# ಉದ್ಯಮಗಳಿಂದ ಖರೀದಿ

(1ನೇ ಪುಟದಿಂದ) ಸರ್ಕಾರ ಉದ್ಯ ಮಗಳಿಗೆ ಪೂರ್ಣ ಬೆಂಬಲ ನೀಡಲಿದೆ ಎಂದು ಹೇಳಿದರು. ಏರ್ ಶೋ ವೇಳೆ ಕಂಪನಿಗಳು ಒಡಂಬಡಿಕೆ ಮಾಡಿಕೊಳ್ಳಲು 'ಬಂಧನ್' ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ 201 ಒಡಂಬಡಿಕೆಗಳಿಗೆ ಸಹಿ ಹಾಕಲಾಯಿತು.

ರಕ್ಷಣಾ ಬಂಡವಾಳಕ್ಕಾಗಿ ಸರ್ಕಾರ ಘೋಷಿಸಿರುವ ಹಣದಲ್ಲಿ ಶೇ.75ರಷ್ಟನ್ನು ಸ್ಥಳೀಯ ಉದ್ಯಮಗಳಿಗೆ ನೀಡಲಾಗುವುದು ಎಂದು ಸಿಂಗ್ ತಿಳಿಸಿದರು. ಅಧಿಕೃತ ಅಂಕಿ ಅಂಶಗಳ ಪ್ರಕಾರ, 2019-20ರಿಂದ 2021-22ರ ನಡುವೆ ಭಾರತದಲ್ಲಿ 2.58 ಲಕ್ಷ ಕೋಟಿ ರೂ. ಮೌಲ್ಯದ ರಕ್ಷಣಾ ಉಪಕರಣಗಳು ಉತ್ಪಾದನೆಯಾಗಿವೆ.

ಸರ್ಕಾರ 2021-22ರಲ್ಲಿ ರಕ್ಷಣಾ ಖರೀದಿಯ ಶೇ.64ರಷ್ಟು ಹಣವನ್ನು ದೇಶೀಯ ಉದ್ಯಮಗಳಿಗೆ ಮೀಸಲಿರಿಸಿತ್ತು. ನಂತರ 2022-23ರಲ್ಲಿ ಶೇ.68ಕ್ಕೆ ಹೆಚ್ಚಿಸಲಾಗಿತ್ತು. ನಮ್ಮ ರಕ್ಷಣಾ ಉದ್ಯಮದ ಮೇಲೆ ಸರ್ಕಾರ ಹಾಗೂ ಸಮಾಜ ಹೊಂದಿರುವ ನಂಬಿಕೆ ವೇಗವಾಗಿ ಬೆಳೆಯುತ್ತಿದೆ. ಈ ಅಮೃತ ಕಾಲದಲ್ಲಿ ಶೇ.75ರಷ್ಟು ಖರೀದಿ ದೇಶೀಯ ಉದ್ಯಮಗಳಿಂದ ನಡೆಯಲಿದೆ ಎಂದು ರಾಜನಾಥ್ ಸಿಂಗ್ ಹೇಳಿದರು.

ಸರ್ಕಾರದ ಈ ಕ್ರಮದ ನಂತರ ದೇಶೀಯ ಉದ್ಯಮ ಮತ್ತಷ್ಟು ಉತ್ಸಾಹದಿಂದ ನಡೆಯಲಿದೆ. ಭಾರತದ ರಕ್ಷಣಾ ಉತ್ಪಾದನಾ ವಲಯ ಮತ್ತಷ್ಟು ಬಲಿಷ್ಠ ಹಾಗೂ ಸಮೃದ್ಧವಾಗಲಿದೆ ಎಂದವರು ತಿಳಿಸಿದರು.


**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸ್ ಬಡಾವಣೆ ಸಿ ಬ್ಲಾಕ್, #367, 2A ಕ್ರಾಸ್, ಫುಡ್ ಆಫೀಸ್ ಹಿಂಭಾಗ, 2 ಬೆಡ್ ರೂಂ ಮನೆ, ಬೋರ್ ಮತ್ತು ನಲ್ಲಿ ನೀರಿನ ವ್ಯವಸ್ಥೆ ಇದೆ. ವಿಚಾರಿಸಿ :
98458 40604
99805 32781

**ಬೇಕಾಗಿದ್ದಾರೆ**
ಅನುಭವ ಇರುವ ಮಹಿಳಾ ಟೆಲಿಕಾಲರ್ - 5 ಸಮಾಜ ಸೇವೆಯಲ್ಲಿ ಆಸಕ್ತಿಯುಳ್ಳ ಉತ್ಸಾಹಿ, ಕರುಣೆ ಮತ್ತು ಬದ್ಧತೆಯುಳ್ಳ ವಿವಾಹಿತ ಮಹಿಳೆಯರು ಮತ್ತು ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
83105 20002

**ಗೋಡೌನ್ ಬಾಡಿಗೆಗೆ ಇದೆ**
5280 Sqft, #137, ಎಪಿಎಂಸಿ ಡಿ ಬ್ಲಾಕ್, ಚೌಡಮ್ಮ ದೇವಸ್ಥಾನದ ಎದುರು, ದಾವಣಗೆರೆ
95350 61255
79751 91291

**ಸೈಟು ಮಾರಾಟಕ್ಕೆ ಇದೆ**
ಎಸ್.ಎ. ರವೀಂದ್ರನಾಥ ನಗರ, ಸರ್ ಎಂ.ವಿ. ಪಿಯು ಕಾಲೇಜು ರಸ್ತೆ, ಲೋಕಿಕೆರೆ ಇಂಡಸ್ಟ್ರಿಯಲ್ ರಸ್ತೆ, 40x60 ಖಾಲಿ ಸೈಟು ಉತ್ತರ ದಿಕ್ಕಿಗೆ, ಮಾರಾಟಕ್ಕೆ ಇದೆ.
63610 73895
90663 71746

**ವ್ಯಾಪಾರ ಸಾಲ ಅಸ್ತಿ ಸಾಲ**
ಮನೆ ಕಟ್ಟಲು ಮತ್ತು ಖರೀದಿಸಲು ಸಾಲ ಸೌಲಭ್ಯವಿದೆ
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
74835 24662

**ಮನೆ ಲೀಸ್‌ಗೆ ಇದೆ**
2BHK 1ನೇ ಮಹಡಿ
1 BHK 1ನೇ ಮಹಡಿ ಮನೆ ಲೀಸ್‌ಗೆ
1 BHK 2ನೇ ಮಹಡಿ ಮನೆ ಬಾಡಿಗೆಗೆ ಇದೆ.
#239/7-62. ಶಾಮನೂರು, ಡಾಲರ್ಸ್‌ಕಾಲೋನಿ, ದಾವಣಗೆರೆ.
91108 95861, 86607 04578

**ಬೇಕಾಗಿದ್ದಾರೆ**
ವಾರ್ಡ್ ಬಾಯ್ ಅಥವಾ ಗರ್ಲ್, ಎಸ್,ಎಸ್,ಎಲ್,ಸಿ, ಅಥವಾ ಪಿ,ಯು,ಸಿ ಆದವರು
77604 84814
98865 67791

**Single Room For Rent**
J.H. Patel Badavane,
Near Podar International School
95358 41058
88617 11072

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಸೈಟುಗಳು ಮಾರಾಟ ಇವೆ**
ಸಿದ್ದವೀರಪ್ಪ 33x50 ಪೂರ್ವ, ವಿದ್ಯಾನಗರ 30x66 ಉತ್ತರ, ರಂಗನಾಥ ಬಡಾವಣೆ 40x80 ಪೂರ್ವ, ವಿನಾಯಕ 30x80 ದಕ್ಷಿಣ.
ಏಜೆಂಟರು, ಯಲ್ಲೋಜಿರಾವ್.ಎಸ್
97418 11694

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಪಕ್ಕದಲ್ಲಿ ಫೈನಲ್ ಅಪ್ರೂವ್ಡ್ ಆಗಿರುವ 20x30, ಪಶ್ಚಿಮ 6 ಸೈಟುಗಳು ಮತ್ತು 20x44 ಪೂರ್ವ 2 ಸೈಟುಗಳು ಮಾರಾಟಕ್ಕಿವೆ. ದರ 1750 ಅಡಿಗೆ ಆಸಕ್ತಿಯುಳ್ಳವರು ಸಂಪರ್ಕಿಸಿ.
97402 58276

**ಸೇಲ್ಸ್ ಬಾಯ್ಸ್/ಗರ್ಲ್ಸ್ ಅಸಿಸ್ಟೆಂಟ್ ಸೇಲ್ಸ್ ಬಾಯ್ಸ್/ಗರ್ಲ್ಸ್ ಹೆಲ್ಪರ್ಸ್ ಬೇಕಾಗಿದ್ದಾರೆ**
ಶ್ರೀ ಮಾರುತಿ ಟೆಕ್ಸ್‌ಟೈಲ್ಸ್ & ಗಾರ್ಮೆಂಟ್ಸ್
ಡೋ.ನಂ. 1212, ರಿಂಗ್ ರೋಡ್ ಹತ್ತಿರ, ಶಾರದಾಂಬ ದೇವಸ್ಥಾನ ವೃತ್ತ, ಎಸ್. ನಿಜಲಿಂಗಪ್ಪ ಬಡಾವಣೆ, ದಾವಣಗೆರೆ - 04
86603 81629
98449 76176

**ನೇರ ಪರೀಕ್ಷೆಗಳು**
SSLC, PUC, BA B.Com, BBA, MBA (ALL) B.Tech, Diploma, ITI, NTC,
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
ಪಾರ್ಟ್ ಟೈಂ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ 6000 ವೇತನ.
ಫೋ. : 86602 35013

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**Avoid Mosquitoes**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628


# ಅಧಿಕಾರಕ್ಕೆ ಬಂದರೆ ಎಲ್ಲಾ ಟೆಂಡರ್ ರದ್ದು

(1ನೇ ಪುಟದಿಂದ) ಟೆಂಡರನ್ನು ಒಂದಕ್ಕೆ ಎರಡರಷ್ಟು ದುಬಾರಿಯಲ್ಲಿ ನೀಡಿ, ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರಕ್ಕೆ ಎಡೆಮಾಡಿ ಕೊಡುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಆಡಳಿತದಲ್ಲಿ ಯಾರಿಗೆ ಸಚಿವ ಸ್ಥಾನ ದೊರೆತಿಲ್ಲವೋ ಅಂತಹವರು ಹಣ ಮಾಡಿಕೊಳ್ಳಲು ಈ ಟೆಂಡರನ್ನು ರಹದಾರಿ ಮಾಡಿಕೊಟ್ಟಿದ್ದಾರೆ ಎಂದು ದೂರಿದರು.

ಈ ಸರ್ಕಾರ ರಾಜ್ಯದ ಬೊಕ್ಕಸವನ್ನು ಯದ್ವಾ ತದ್ವಾ ಲೂಟಿ ಮಾಡಲು ಆರಂಭ ಮಾಡಿದೆ. ಶಾಸಕರಿಗೆ ದುಡ್ಡು ಮಾಡಿಕೊಡಲು ತರಾತುರಿಯಲ್ಲಿ ಕೆಬಿಜೆಎಲ್‌ನಲ್ಲಿ, ವಿಶ್ವೇಶರಯ್ಯ ನೀರಾವರಿ ನಿಗಮದಲ್ಲಿ, ಕರ್ನಾಟಕ ನೀರಾವರಿ ನಿಗಮದಲ್ಲಿ ಸಭೆಯನ್ನು ಕರೆದು ಯೋಜನೆಗಳಿಗೆ ಅನುಮೋದನೆ ಪಡೆಯಲಾಗುತ್ತಿದೆ ಎಂದು ಹೇಳಿದರು.

ಇದರಲ್ಲಿ ಪಾರದರ್ಶಕತೆ ಇಲ್ಲ. ಟೆಂಡರ್ ಹಣವನ್ನು ಕೂಡ ಎರಡು, ಮೂರು ಪಟ್ಟು ಹೆಚ್ಚಿಗೆ ಮಾಡಿಕೊಂಡಿದ್ದಾರೆ. ಇದು ನಲವತ್ತು ಪರ್ಸೆಂಟ್ ಕಮೀಷನ್‌ನ ಮುಂದುವರೆದ ಭಾಗ ಎಂದು ದೂರಿದರು. ಲೋಕೋಪಯೋಗಿ, ನೀರಾವರಿ, ಬಿಬಿಎಂಪಿ, ಗ್ರಾಮೀಣಾಭಿವೃದ್ಧಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಸುಮಾರು 20,000 ಕೋಟಿ ರೂ ಬಾಕಿ ಬಿಲ್ ಇದೆ.

ಹತ್ತು ಪರ್ಸೆಂಟ್ ಕಮೀಷನ್ ಕೊಟ್ಟವರಿಗೆ ದುಡ್ಡು ಕೊಡುವ ಕೆಲಸ ನಡೆಯುತ್ತಿದೆ, ಇದು ಮುಖ್ಯಮಂತ್ರಿ ಕಚೇರಿಯಿಂದಲೇ ಆರಂಭವಾಗಿದ್ದು, ಇದನ್ನು ತಡೆಗಟ್ಟಬೇಕಾದದ್ದು ಅಗತ್ಯ. ಇದನ್ನು ಸದನದಲ್ಲಿ ಕೂಡ ಪ್ರಸ್ತಾಪ ಮಾಡುತ್ತೇವೆ ಎಂದರು.

ಸರ್ಕಾರಕ್ಕೆ, ಗುತ್ತಿಗೆದಾರರಿಗೆ, ಅಧಿಕಾರಿಗಳಿಗೆ ಮಾಧ್ಯಮಗಳ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ, ಮುಂದೆ ಕಾನೂನುಬಾಹಿರವಾಗಿ ಈ ರೀತಿ ಮಾಡಿದರೆ ನೀವು ಸಿಕ್ಕಿಹಾಕಿಕೊಳ್ಳುತ್ತೀರಿ. ಈ ವಿಚಾರವನ್ನು ತಾತ್ವಿಕ ಅಂತ್ಯ ಕಾಣಿಸುವವರೆಗೂ ನಾವು ಬಿಡುವುದಿಲ್ಲ. ನ್ಯಾಯಾಲಯದಲ್ಲಿ ಇವರ ವಿರುದ್ಧ ನಾವು ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇವೆ ಎಂದು ಎಚ್ಚರಿಸಿದರು.

ಇದಕ್ಕೆ ಪೂರಕವಾಗಿ ಗೂಳಿಹಟ್ಟಿ ಶೇಖರ್ ಅವರು ಜಲಸಂಪನ್ಮೂಲ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ಅವರಿಗೆ ಪತ್ರ ಬರೆದು ಕೆಬಿಜೆಎನ್‌ಎಲ್, ವಿಜಿಜೆಎಎನ್‌ಎಲ್, ಕೆಎನ್‌ಎನ್‌ಎಲ್ ಹೀಗೆ ಹಲವು ನೀರಾವರಿ ನಿಗಮಗಳಲ್ಲಿ ಅಕ್ರಮ ನಡವಳಿಕೆಗಳನ್ನು ಮಾಡಿಕೊಂಡು ಒಂದೇ ದಿನ ಸುಮಾರು 18,000 ಕೋಟಿ ರೂ. ಟೆಂಡರ್, ವರ್ಕ್ ಆರ್ಡರ್ ನೀಡಿರುವುದನ್ನು ರದ್ದುಪಡಿಸಿ ಮರು ಟೆಂಡರ್‌ಗೆ ಆದೇಶ ನೀಡಿರುವುದನ್ನು ರದ್ದು ಮಾಡಬೇಕು ಎಂದು ಪತ್ರ ಬರೆದಿದ್ದಾರೆ ಎಂದು ತಿಳಿಸಿದರು.

ಈ ರೀತಿ ಎಲ್ಲಾ ಶಾಸಕರು ಹೇಳಿದ್ದಾರೆ, ಚುನಾವಣೆ ಕಾಲ ಬಂದಿರುವುದರಿಂದ ಹಣ ಸಂಗ್ರಹ ಮಾಡಿಕೊಳ್ಳಲು ರಾಜ್ಯದ ಖಜಾನೆಯನ್ನು ಲೂಟಿ ಮಾಡಲು ಹೊರಟಿದ್ದಾರೆ. ಪ್ರತೀ ಓಟಿಗೆ 6000 ರೂ. ನೀಡುತ್ತೇವೆ ಎಂದು ಬಹಿರಂಗವಾಗಿ ಹೇಳುತ್ತಿದ್ದಾರೆ. ಇಂಥ ಕೆಟ್ಟ ರಾಜಕೀಯವನ್ನು ನಾನು ಎಂದೂ ನೋಡಿರಲಿಲ್ಲ. ಇದನ್ನು ತಡೆಗಟ್ಟದೇ ಹೋದರೆ ರಾಜ್ಯ ಉಳಿಯುವುದಿಲ್ಲ ಎಂದು ಹೇಳಿದರು.


**ಬೇಕಾಗಿದ್ದಾರೆ**
ಮಧ್ಯಾಹ್ನ 12 ಗಂಟೆಗೆ ಮನೆ ಕೆಲಸ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ.
ಸಂಪರ್ಕಿಸಿ :
63639-54459

**JOBS**
HR, Civil Engineer, Autocad Draftsman, Telecallers, CRM, Billing, sales, Graphic Designer, Office Manager, Marketing, Cashier, Digital Marketing
98444 92888

**ಬೇಕಾಗಿದ್ದಾರೆ**
1) ಡಿಲೆವರಿ ಬಾಯ್ಸ್. 2) ಮೆಡಿಕಲ್ ಶಾಪ್ಸ್ ಆರ್ಡರ್ ಬುಕ್ಕಿಂಗ್ ಬಾಯ್ಸ್. 3) Bcom account with computer (Married Ladies Preference ) Experience 5 years. ಎ.ಕೆ. ಟ್ರೇಡರ್ಸ್
ಆಶೀರ್ವಾದ್, ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ. ದಾವಣಗೆರೆ - 577004

**ಖಾಲಿ ಜಾಗ / ಕಟ್ಟಡ ಖರೀದಿಗೆ ಬೇಕಾಗಿದೆ**
ದಾವಣಗೆರೆಯ ಪ್ರತಿಷ್ಠಿತ ದಿ ಪಾವಗಡ ಸೌಹಾರ್ದ ವಿವಿಧೋದ್ದೇಶ ಸಹಕಾರ ನಿ., ಸಂಸ್ಥೆಗೆ 30x40 ಅಥವಾ 30x50 ಅಡಿ ಅಳತೆಯ ಸೈಟು ಅಥವಾ ಕಟ್ಟಡ ಖರೀದಿಗೆ ಬೇಕಾಗಿದೆ. ಸಂಪರ್ಕಿಸಿ
88842 18143, 63609 09309, 98442 46233


## ಹೆಚ್. ಗುರುಸಿದ್ದಪ್ಪ (CITB ಬಸಣ್ಣ) ನಿಧನ



ದಾವಣಗೆರೆ ಕಾಯಿಪೇಟೆ ಹಿರೇಮಠ ವಾಸಿ, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನಿವೃತ್ತ ನೌಕರರಾಗಿದ್ದ ಶ್ರೀ ಹೆಚ್. ಗುರುಸಿದ್ದಪ್ಪ (CITB ಬಸಣ್ಣ) ಅವರು ದಿನಾಂಕ 14-02-2023ರ ಮಂಗಳವಾರ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಸಹೋದರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15-02-2023ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನಗರದ ಹಿಂದೂ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು.

ಇಂತಿ ದುಃಖತಪ್ತರು :
ಸಹೋದರಿ ಹಾಗೂ ಕುಟುಂಬ ವರ್ಗದವರು ಮತ್ತು ಬಂಧು-ಮಿತ್ರರು. ಮೊ. : 98442 73736

## ಸವಿ ನೆನಪು



ಜನನ : 19-11-1929
ನಿಧನ : 16-02-2018

**ಲಿಂ।। ಶ್ರೀ ಹೆಚ್.ಡಿ. ಹನುಮಂತಪ್ಪನವರು**
ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮಾಜಿ ಛೇರ್ಮನ್ನರು, ಹರಳಹಳ್ಳಿ,
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಬಸಮ್ಮ, ಶ್ರೀಮತಿ ಕಮಲಮ್ಮ
ಮಕ್ಕಳು : ಶ್ರೀ ದೇವಜ್ಜಿ ರಮೇಶ್ ಮತ್ತು ಶ್ರೀಮತಿ ನಿರ್ಮಲ ಮತ್ತು ಚಿ।। ಸೃಜನ್, ಜೀವನ್, ಹರಳಹಳ್ಳಿ
ಶ್ರೀಮತಿ ಅಂಜಿನಮ್ಮ ಮತ್ತು ಶ್ರೀ ಉತ್ತಂಗಿ ಮಂಜಪ್ಪ, ದಾವಣಗೆರೆ,
ಶ್ರೀಮತಿ ಸುಲೋಚನಾ ಮತ್ತು ಶ್ರೀ ಬಸವರಾಜಪ್ಪ ಮತ್ತು ಮಕ್ಕಳು, ಚಿಕ್ಕಬೂದಿಹಾಳು
ಶ್ರೀಮತಿ ರೇಣುಕ ಮತ್ತು ಶ್ರೀ ಮಂಜಪ್ಪ ಮತ್ತು ಮಕ್ಕಳು, ಚಿಕ್ಕಬೂದಿಹಾಳು
ಶ್ರೀಮತಿ ಭಾರತಿ ಮತ್ತು ಶ್ರೀ ರವಿ ಹೆಚ್.ಎಂ. ಮತ್ತು ಮಕ್ಕಳು, ದಾವಣಗೆರೆ.

## ಚಿರಸ್ಮರಣೆ



**ದಿ. ಹೆಚ್.ಎಂ. ಪ್ರೇಮಕುಮಾರಿ ಹನಗೋಡಿ ಮಠ**

ನೀವು ನಮ್ಮನ್ನಗಲಿ ಇಂದಿಗೆ 22 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಮಗಳು : ಶ್ರೀಮತಿ ಸುಮನ್ ವಿ. ಕಟಗಿಹಳ್ಳಿಮಠ
ಅಳಿಯ : ಶ್ರೀ ವಾಗೀಶ್ ಕಟಗಿಹಳ್ಳಿಮಠ, ವಕೀಲರು
ಮೊಮ್ಮಕ್ಕಳು : ಸೋಹನ್ ವಿ. ಕಟಗಿಹಳ್ಳಿಮಠ, ವಕೀಲರು
ಧವನ್ ವಿ. ಕಟಗಿಹಳ್ಳಿಮಠ


**REQUIRED**
TELLECALLERS ONLY FOR LADIES FOR SCIENCE PU COLLEGE
LOCATION : DAVANGERE, ANJANEYA BADAVANE BIET ROAD
78999 905792
87628 67557

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ಧರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಿಗೆ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ.
ಸಂಪರ್ಕಿಸಿ : 63639-54459

**ಮಳಿಗೆ ಬಾಡಿಗೆಗೆ ಇದೆ**
ಅಶೋಕ ರೋಡ್ 1st ಫ್ಲೋರ್ ಮತ್ತು ಹಿಂಬದಿಯ ಮಳಿಗೆ, ಈಶ್ವರ ರೇಡಿಯೋ & ಟಿವಿ ಎದುರು, ಜಯದೇವ ಸರ್ಕಲ್ ಹತ್ತಿರ D/O No. 407, ಮಳಿಗೆ ವಿಸ್ತೀರ್ಣ 1st ಫ್ಲೋರ್ ವಿಸ್ತೀರ್ಣ 10x100, ಹಿಂಬದಿಯ ಮಳಿಗೆ 10x50.
ಸಂಪರ್ಕಿಸಿ : ಉಲ್ಲಾಸ್
85498 16336

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ: ಕಾವೇರಿ ಮೆಡಿಹೌಸ್ ಪ್ರೈ. ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

## ನಗರದ ಕಲಾವಿದ ಮಹಾಲಿಂಗಪ್ಪನವರ ಏಕ ವ್ಯಕ್ತಿ ಚಿತ್ರಕಲಾ ಪ್ರದರ್ಶನ ಉದ್ಘಾಟನೆ



ದಾವಣಗೆರೆ, ಫೆ. 15- ನಗರದ ಹಿರಿಯ ಕಲಾವಿದ ಎ. ಮಹಾಲಿಂಗಪ್ಪ ಅವರ ಏಕ ವ್ಯಕ್ತಿ ಚಿತ್ರ ಕಲಾ ಪ್ರದರ್ಶನವನ್ನು ಶಿವಮೊಗ್ಗದ ಕರ್ನಾಟಕ ಸಂಘದಲ್ಲಿ ಕುವೆಂಪು ವಿಶ್ವ ವಿದ್ಯಾಲಯದ ಕುಲಪತಿ ಡಾ. ಬಿ.ಪಿ. ವೀರಭದ್ರಪ್ಪ ಅವರು ಇಂದು ಉದ್ಘಾಟಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಎಸ್. ಸುಂದರರಾಜ್ ಅಧ್ಯಕ್ಷತೆ ವಹಿಸಿದ್ದರು. ಹಾಲಪ್ಪ, ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಮಕ್ಕಳಿಗೆ ಸ್ಥಳದಲ್ಲಿಯೇ ಚಿತ್ರ ರಚನಾ ಸ್ಪರ್ಧೆ ನಡೆಸಿ, ಬಹುಮಾನ ವಿತರಿಸಲಾಯಿತು. ಶಿವಾನಂದ ಪ್ರಾರ್ಥಿಸಿದರು. ದೀಪು ಸ್ವಾಗತಿಸಿದರು.

## ಅರವಿಂದ ಕೇಜ್ರಿವಾಲ್ : ನಗರಕ್ಕೆ ಇಂದು ಸಂಚಿತ ಸಹನಿ

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅರವಿಂದ ಕೇಜ್ರಿವಾಲ್ ಅವರು ಮಾರ್ಚ್ 4ರಂದು ದಾವಣಗೆರೆಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಕಾರ್ಯಕ್ರಮದ ಸ್ಥಳ ವೀಕ್ಷಣೆಗಾಗಿ ಇಂದು ಬೆಳಿಗ್ಗೆ 10.30 ಕ್ಕೆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ ಸಹನಿ ಆಗಮಿಸಲಿದ್ದಾರೆ.

ಸ್ಥಳ ವೀಕ್ಷಣೆ ಹಾಗೂ ಕಾರ್ಯಕರ್ತರ ಜೊತೆ ಮುಂದಿನ ಕಾರ್ಯ ಯೋಜನೆಗಳ ಬಗ್ಗೆ ದಾವಣಗೆರೆ ಜಿಲ್ಲಾ ಕಚೇರಿಯಲ್ಲಿ ಚರ್ಚಿಸಲಿದ್ದಾರೆ ಎಂದು ಜಿಲ್ಲಾ ಕಾರ್ಯದರ್ಶಿ ಸಿ.ಆರ್. ಅರುಣ್ ಕುಮಾರ್ ತಿಳಿಸಿದ್ದಾರೆ.

## ಆಹಾರ ಕಾಯ್ದೆಯಡಿ ಪಡಿತರ ವಿತರಣೆ

ದಾವಣಗೆರೆ, ಫೆ. 15- ಕೇಂದ್ರ ಸರ್ಕಾರವು ರಾಷ್ಟೀಯ ಆಹಾರ ಭದ್ರತಾ ಕಾಯ್ದೆಯಡಿ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗಳಿಗೆ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಿಸುವುದರೊಂದಿಗೆ ರಾಜ್ಯ ಸರ್ಕಾರದ ವೆಚ್ಚದಲ್ಲಿ 1 ಕೆ.ಜಿ ಅಕ್ಕಿಯನ್ನು ಹೆಚ್ಚುವರಿಯಾಗಿ ವಿತರಿಸಲಾಗುತ್ತಿದೆ.

ನ್ಯಾಯಬೆಲೆ ಅಂಗಡಿಗಳಲ್ಲಿ ಅಂತ್ಯೋದಯ ಪ್ರತಿ ಕಾರ್ಡುದಾರರಿಗೆ 35 ಕೆ.ಜಿ ಅಕ್ಕಿ ಹಾಗೂ ಬಿ.ಪಿ.ಎಲ್ ಕಾರ್ಡುದಾರರಿಗೆ ತಲಾ 7 ಕೆ.ಜಿ ಅಕ್ಕಿ ಮತ್ತು ಒಪ್ಪಿಗೆ ನೀಡಿದ ಏಕಸದಸ್ಯ ಎ.ಪಿ.ಎಲ್ ಪಡಿತರ ಚೀಟಿದಾರರಿಗೆ 15ರೂ. ಗಳಂತೆ 10 ಕೆ.ಜಿಯವರೆಗೆ ಪಡಿತರ ನೀಡಲಾಗುತ್ತದೆ.ಪಡಿತರ ಚೀಟಿದಾರರು ಅಂತರ್ ರಾಜ್ಯ/ಜಿಲ್ಲೆಗಳ ನ್ಯಾಯಬೆಲೆ ಅಂಗಡಿಗಳಲ್ಲಿ ಉಚಿತವಾಗಿ ಪಡಿತರ ಪಡೆಯಲು ಅವಕಾಶ ಕಲ್ಪಿಸಿದ್ದು, ಪಡಿತರ ಚೀಟಿದಾರರು ನ್ಯಾಯ ಬೆಲೆ ಅಂಗಡಿಗಳಲ್ಲಿ ವಿಳಾಸ ನೀಡಿದ ತಕ್ಷಣ ರಶೀದಿ ಪಡೆದು ಅದರಂತೆ ಆಹಾರ ಧಾನ್ಯಗಳನ್ನು ಪಡೆಯಬೇಕು ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

## ಕ್ರೀಡಾ ಪಟುಗಳಿಂದ ನಗದು ಪುರಸ್ಕಾರ

ದಾವಣಗೆರೆ, ಫೆ. 15- ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪದಕ ವಿಜೇತರಾದ ಕ್ರೀಡಾ ಪಟುಗಳಿಗೆ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ನಗದು ಪುರಸ್ಕಾರಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಏಪ್ರಿಲ್ 30 ರೊಳಗಾಗಿ ವೆಬ್‌ಸೈಟ್ https://dbtvas-sports.gov.in ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.













# ಕೊಟ್ಟೂರಿನಲ್ಲಿಂದು ಶ್ರೀಗುರು ಬಸವೇಶ್ವರ ಸ್ವಾಮಿ ರಥೋತ್ಸವದ ವೈಭವ

ಉತ್ತಂಗಿ ಕೊಟ್ರೇಶ್

ಕಾಯಕ ಧರ್ಮ ಪಾಲಿಸಿ, ಶುದ್ಧ ಭಕ್ತಿಯಿಂದ ನಂಬಿ ಬರುವ ಭಕ್ತರನ್ನು ಕೈಹಿಡಿದು ಕಾಪಾಡುವ ಮಹಾಮಹಿಮ ಎಂದೇ ಹೆಸರಾದ ಕೊಟ್ಟೂರು ಶ್ರೀ ಗುರು ಬಸವೇಶ್ವರ ಸ್ವಾಮಿ ರಥೋತ್ಸವವು ನಾಳೆ (ಫೆ.16) ಗುರುವಾರ ಸಂಜೆ ಮೂಲಾ ನಕ್ಷತ್ರದಲ್ಲಿ ವೈಭವದಿಂದ ಜರುಗಲಿದೆ.

ರಥೋತ್ಸವಕ್ಕೆ ರಾಜ್ಯದ ನಾನಾ ಭಾಗಗಳು ಸೇರಿದಂತೆ ಅಕ್ಕ-ಪಕ್ಕದ ರಾಜ್ಯಗಳಲ್ಲಿ ನೆಲೆಸಿರುವ ಸ್ವಾಮಿಯ ಭಕ್ತರೂ ಆಗಮಿಸುತ್ತಾರೆ.

ಕೊಟ್ಟೂರೇಶ, ಬಸವರಾಜ, ನಂದಿಲಿಂಗ, ವೃಷಭರಾಜೇಂದ್ರ, ಗುರು ಬಸವೇಶ್ವರ, ಹುಚ್ಚೇಶ್ವರ, ಬಸವರಾಜೇಂದ್ರ ಮತ್ತಿತರೆ ಹೆಸರುಗಳಿಂದಲೂ ಕರೆಯಲ್ಪಡುವ ಸ್ವಾಮಿ, ಕೊಟ್ಟೂರಿನ ಹಿರೇಮಠ, ತೊಟ್ಟಿಲು ಮಠ, ಗಚ್ಚಿನ ಮಠ, ಮೂರುಕಲ್ಲು ಮಠ ಸೇರಿದಂತೆ, ಮರಿ ಕೊಟ್ಟೂರೇಶನ ದೇವಸ್ಥಾನದಲ್ಲಿಯೂ ಪೂಜಿಸಲ್ಪಡುತ್ತಾನೆ. ಗಚ್ಚಿನ ಮಠದಲ್ಲಿ ಶ್ರೀ ಸ್ವಾಮಿಯ ಜೀವಂತ ಸಮಾಧಿ ಇದ್ದು, ಅಕ್ಬರ್ ಚಕ್ರವರ್ತಿ ನೀಡಿರುವರೆನ್ನಲಾದ ಒಂದು ಮಣಿ ಮಂಚ ಮತ್ತು ರತ್ನ ಖಚಿತ ಖಡ್ಗ ಕೂಡ ಇದೆ. ಈ ಮಠವನ್ನು ಸೋಮಶೇಖರ ಪಾಳೇಗಾರ ಎಂಬಾತ ಕಟ್ಟಿಸಿದ್ದಾನೆ ಎಂದು ಹೇಳಲಾಗುತ್ತದೆ.

ಭೂ ಲೋಕದಲ್ಲಿ ಅನಾಚಾರ ಹೆಚ್ಚಾಗಿ, ದೈವ ಭಕ್ತಿ ಕಡಿಮೆ ಆಗಿರುವ ಸುದ್ದಿ ನಾರದಮುನಿಗಳಿಂದ ತಿಳಿದುಕೊಂಡ ಶ್ರೀ ಪರಮೇಶ್ವರನು, ಧರ್ಮ ರಕ್ಷಣೆಗಾಗಿ ಪಂಚ ಗಣಾಧೀಶರ ಜೊತೆಗೆ ತಾನೂ ಸಹ ಭೂಲೋಕಕ್ಕೆ ಬರುತ್ತಾನೆ. ನಂದೀಶನಿಲ್ಲದೇ ಶಿವನಿಲ್ಲ, ಶಿವನಿಲ್ಲದೆ ನಂದೀಶನಿಲ್ಲ ಎನ್ನುವ ಹಾಗೆ ನಂದೀಶನಿಗೂ ಮೊದಲು ಶಿವನೇ ಬರುತ್ತಾನಂತೆ.

ಗಣಾಧೀಶರಲ್ಲಿ ಅಗ್ರಗಣ್ಯರಾದ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಜೊತೆಗೆ ಹರಪನಹಳ್ಳಿಯ ಶ್ರೀ ಗುರು ಕೆಂಪೇಶ್ವರ ಸ್ವಾಮಿ, ಅರಸಿಕೆರೆ ಶ್ರೀ ಗುರು ಕೋಲ ಶಾಂತೇಶ್ವರ ಸ್ವಾಮಿ, ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರ ಸ್ವಾಮಿ, ಕೋಲಹಳ್ಳಿ ಶ್ರೀ ಗುರು ಮದ್ದಾನ ಸ್ವಾಮಿ ಸಹ ಭೂಲೋಕಕ್ಕೆ ಕಳುಹಿಸಲ್ಪಡುತ್ತಾರೆ ಎಂಬುದನ್ನು ಪುರಾಣಗಳು ತಿಳಿಸುತ್ತವೆ.

ಸತ್ಪುರಷ ಶಿವಯೋಗಿ ಬಸವರಾಜರು ಶಿಖಾಪುರಕ್ಕೆ ಬಂದಾಗ ಅವರ ವರ್ತನೆ ವಿಚಿತ್ರವಾಗಿತ್ತು. ಕೆಲವು ಪೋಕರಿಗಳು ಹುಚ್ಚನೆಂದು ತಮಾಷೆ ಮಾಡುತ್ತಾರೆ, ಕಲ್ಲು ಎಸೆಯುತ್ತಾರೆ. ಆ ಕಲ್ಲುಗಳನ್ನೇ 'ಲಿಂಗ'ವನ್ನಾಗಿಸಿ, ಸದಾ ಪರಶಿವನ ಧ್ಯಾನದಲ್ಲಿ ಇರುತ್ತಿದ್ದ ಅವರು ಸಜ್ಜನರ ರಕ್ಷಣೆ, ದುರ್ಜನರಿಗೆ ಶಿಕ್ಷೆ ಎನ್ನುವ ರೀತಿಯಲ್ಲಿ ಇರುತ್ತಾರೆ. ಗುರು ಬಸವರಾಜರ ಈ ಲೀಲೆ ಕಂಡು, ಈತ ಸಾಮಾನ್ಯನಲ್ಲ ನಮ್ಮರಕ್ಷಣೆಗಾಗಿ ಬಂದಿರುವ ಪುಣ್ಯಮೂರ್ತಿ, ಸದಾಶಿವನ ಅವತಾರಿ ಎಂದು ಜನರು ಭಕ್ತಿಯಿಂದ ನಮಸ್ಕರಿಸಿ, ಪೂಜಿಸತೊಡಗುತ್ತಾರೆ.



ಕೊಟ್ಟೂರಿಗೆ ಮೊದಲು ಶಿಖಾಪುರ ಎಂಬ ಹೆಸರಿತ್ತು, ಶ್ರೀ ಗುರು ಕೊಟ್ಟೂರೇಶ್ವರರು ಇಲ್ಲಿಗೆ ಆಗಮಿಸಿ ಪವಾಡದ ರೀತಿಯಲ್ಲಿ ಸಹಾಯ ಮಾಡುತ್ತಿದ್ದುದರಿಂದಾಗಿ, ಶಿಖಾಪುರಕ್ಕೆ 'ಕೊಡುವ' ಊರು 'ಕೊಟ್ಟೂರು' ಎಂಬ ಹೆಸರು ಬಂದಿತಂತೆ.

ಪರಶಿವನ ಶಕ್ತಿ ಸ್ವರೂಪನಾದ ಶ್ರೀ ಬಸವರಾಜ, ನಂಬಿಯಕ್ಕನ ಆಶ್ರಯಕ್ಕೆ ಬಂದು, ಕಾಯಕ ಧರ್ಮ ಪಾಲಿಸುತ್ತಾನೆ. ದನಕಾಯಲು ಹೋಗಿ ಭೋರ್ಗರೆದ ನೀರಿನಲ್ಲಿ ಏಳು ದಿನ ಕಳೆದು ಜೀವಂತ ಬಂದದ್ದು, ಮೂರುಕಲ್ಲು ಮಠದಲ್ಲಿ ಬೆಂಕಿ ಪವಾಡ ಮೆರೆದದ್ದು ಭಕ್ತರನ್ನು ಆಶ್ಚರ್ಯಚಕಿತರಾಗುವಂತೆ ಮಾಡುತ್ತದೆ. ಕೊಟ್ಟೂರ ಮೇಲೆ ದಾಳಿ ನಡೆಸುವ ವೈರಿ ಪಡೆಗಳ ವಿರುದ್ಧ ಧರ್ಮ ಯುದ್ಧಮಾಡಿ ಜಯಿಸುತ್ತಾರೆ.

ಧರ್ಮದ ಮುಖ್ಯ ತತ್ವಗಳನ್ನು ಜನರು ತಮ್ಮ ಜೀವನದಲ್ಲಿ ಅಳವಡಿ ಸಿಕೊಂಡು ನಡೆಯುವಂತೆ ಬೋಧಿಸುವ ಮೊದಲು, ಅವುಗಳನ್ನು ಸ್ವತಃ ತಾವೇ ಆಚರಿಸಿ ತೋರಿಸಲು ಅನೇಕ ಲೀಲಾ ವಿನೋದಗಳನ್ನು ಮಾಡುತ್ತಾರೆ. ಹಾಗಾಗಿ ಹುಚ್ಚನ ಹಾಗೆ, ಶಿವಭಕ್ತನ ರೂಪದಲ್ಲಿ, ಹಠವಾದಿಯಂತೆ ನಡೆದುಕೊಳ್ಳುತ್ತಾರೆ.

## ಕೈಲಾಸಕ್ಕೆ ತೆರಳುವ ಆತ್ಮಜ್ಯೋತಿ

ಭೂಲೋಕದಲ್ಲಿ ಶಿವನು ವಹಿಸಿದ ಕಾರ್ಯ ಪೂರ್ಣವಾಗುತ್ತಲೇ, ಒಮ್ಮೆ ಶ್ರೀ ಗುರು ಬಸವರಾಜರ ಕರಂಡಕದಲ್ಲಿನ ವಿಭೂತಿ ಮಾಯವಾಗಿ ಹೋಗುತ್ತದೆ. ಇದು ತಮ್ಮ ಅಂತ್ಯಕಾಲದ ಸೂಚನೆ ಎಂದು ಅರಿತ ಅವರು ಗಚ್ಚಿನ ಮಠದ ಸ್ಥಳದಲ್ಲಿ ತ್ರಿಕೋಣ ಸಮಾಧಿ ನಿರ್ಮಿಸಿ, ಪುಷ್ಪ, ಸಾರಣಿ, ರಂಗವಲ್ಯಾದಿಗಳಿಂದ ಅಲಂಕರಿಸಿ ಪೂಜಿಸಿ ಸಿದ್ಧ ಮಾಡಿಕೊಳ್ಳುತ್ತಾರೆ. ನಂತರ ಸ್ನಾನ, ಪೂಜೆ ಮಾಡಿ ಶಿವಲಾಂಚನ ಧರಿಸಿ ಯೋಗ ಸಮಾಧಿಯಲ್ಲಿ, ಪದ್ಮಾಸನದಿಂದ ಕುಂಭಕ ಪ್ರಾಣಾಯಾಮ ಮಾಡಿ ಇಷ್ಟಲಿಂಗದಲ್ಲಿ ದೃಷ್ಟಿಯಿರಿಸಿ ಲಿಂಗೈಕ್ಯರಾಗುತ್ತಾರೆ. ಬ್ರಾಹ್ಮೀ ಮುಹೂರ್ತದಲ್ಲಿ ಅವರ ಆತ್ಮಜ್ಯೋತಿ ಬ್ರಹ್ಮರಂಧ್ರದಿಂದ ಕೈಲಾಸಕ್ಕೆ ತೆರಳುತ್ತದೆ. ಅವರ ಆ ದಿವ್ಯ ಜೀವನದ ಸಂಕೇತವಾಗಿ ಮಾಘ ಬಹುಳ ದಶಮಿಗೆ ಶ್ರೀ ಗುರುವಿನ 'ರಥೋತ್ಸವ' ಅಂದಿನಿಂದಲೂ ಅನೂಚಾನವಾಗಿ ನಡೆದುಕೊಂಡು ಬರಲಾಗುತ್ತಿದೆ.

ಹಿರೇಮಠದಲ್ಲಿರುವ ಮೂಲ ವಿಗ್ರಹವೇ ರಥೋತ್ಸವದಲ್ಲಿ ವಿರಾಜಿಸುತ್ತದೆ. ರಥಕ್ಕೆ ಮೊದಲು ಹರಿಜನ ಮಹಿಳೆ ಕಳಸದಾರತಿ ಬೆಳಗುವುದು ವಿಶೇಷ. ಸ್ವಾಮಿಗೆ ಆಕಳ ಗಿಣ್ಣದ ನೈವೇದ್ಯ ಮಾಡಲಾಗುತ್ತದೆ. ಗುರುವಿನ ಕೃಪೆಯಿಂದ ರಥೋತ್ಸವ ಸಂದರ್ಭದಲ್ಲಿ ಯಾವುದಾದರೊಂದು ಆಕಳು ಕರುವನ್ನು ಹಾಕಿರುತ್ತದಂತೆ.

ಶ್ರೀ ಸ್ವಾಮಿಗೆ ಭಕ್ತಿಯಿಂದ, ತ್ರಿಕರಣ ಪೂರ್ವಕವಾಗಿ ನಡೆದುಕೊಳ್ಳುವ ಭಕ್ತರಿಗೆ ರಕ್ಷಕನಾಗಿ ಕಾಯುತ್ತಾನೆ. ಆಕಾಂಕ್ಷೆಗಳನ್ನು ಈಡೇರಿಸುತ್ತಾನೆ. ದುರ್ವಿಧಿ ಮತ್ತು ದುಷ್ಟಗ್ರಹಚಾರವನ್ನು ಹೋಗಲಾಡಿಸಿ, ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸುತ್ತಾನೆ ಎಂಬ ನಂಬಿಕೆ ಲಕ್ಷಾಂತರ ಭಕ್ತರ ಮನದಾಳದಲ್ಲಿ ಬೇರೂರಿದೆ. ಅದಕ್ಕೆ ಆತನ ರಥೋತ್ಸವಕ್ಕೆ ಸೇರುವ ಜನಸಾಗರವೇ ಸಾಕ್ಷಿ.

ಈ ಹಿಂದೆ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಕೊಟ್ಟೂರು, ಜಿಲ್ಲಾ ಪುನರ್ವಿಂಗಡಣೆಯಿಂದಾಗಿ ವಿಜಯನಗರ ಜಿಲ್ಲಾ ವ್ಯಾಪ್ತಿಗೆ ಈಗ ಒಳಪಟ್ಟಿದೆ. ಈಗಾಗಲೇ ಜಾತ್ರೆಯ ಸಡಗರ-ಸಂಭ್ರಮ ಕೊಟ್ಟೂರ ತುಂಬೆಲ್ಲ ಹರಡಿದೆ. ಜಾತ್ರಾ ಸಿದ್ಧತೆಗಳು ಭರದಿಂದ ಸಾಗಿವೆ. ಧಾರ್ಮಿಕ ವಿಧಿ-ವಿಧಾನಗಳು ಪದ್ಧತಿಯಂತೆಯೇ ಸಾಗಿವೆ.

## 'ಕೊಟ್ಟೂರ ದೊರೆಯೇ ನಿನಗಾರು ಸರಿಯೇ'

ಗುರುವಾರ ಕೊಟ್ಟೂರಿನಲ್ಲಿ ಎಲ್ಲಿ ನೋಡಿದರಲ್ಲಿ ಜನವೋ ಜನ. ಕಡುಬಿಸಿಲಿನ ಪರಿವೆಯೇ ಇಲ್ಲದ ಹಾಗೆ, ತೇರು ಹರಿಯುವುದನ್ನೇ ಆತುರದಿಂದ ಕಾಯುವ ಭಕ್ತಸ್ತೋಮ. ಮೂಲಾ ನಕ್ಷತ್ರದಲ್ಲಿ ತೇರು ಎಳೆಯುತ್ತಲೇ, ಆ ಸಂಭ್ರಮ ಕಣ್ತುಂಬಿಕೊಳ್ಳುವುದರ ಜೊತೆಗೆ ರಥಕ್ಕೆ ಬಾಳೆ ಹಣ್ಣುಗಳನ್ನು ಎಸೆದು ಗುರಿ ತಲುಪಿಸಿ, ಗುರುವಿನ ಆಶೀರ್ವಾದ ದೊರೆತ, ಧನ್ಯತಾ ಭಾವ ಹೊಂದುತ್ತಾರೆ. ಕಾಲು ನೋವಿನ ಮಧ್ಯೆಯೂ ಪಾದಯಾತ್ರೆ ನಡೆಸಿದ ಭಕ್ತರು ಜೈಕಾರ ಹಾಕುತ್ತಾರೆ. ಕೈಮುಗಿದು ಕಾಪಾಡು ಗುರುವೇ ಎನ್ನುತ್ತಾರೆ.

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವ ಹಿರೇಮಠ ಈಗ ಸಾಕಷ್ಟು ಅಭಿವೃದ್ಧಿ ಕಂಡಿದೆ. ಇನ್ನು ತೊಟ್ಟಿಲು ಮಠದಲ್ಲಿರುವ ತೊಟ್ಟಿಲನ್ನು ಮಕ್ಕಳಾಗದವರು ತೂಗಿದರೆ ಮಕ್ಕಳಾಗುತ್ತವೆ ಎಂಬ ಪ್ರತೀತಿ ಇದೆ. ಹೊಸದಾಗಿ ಮದುವೆಯಾದ ಜೋಡಿಗಳು, ಬಹಳ ವರ್ಷಗಳಿಂದ ಮಕ್ಕಳಾಗದವರು ದೇವರ ದರ್ಶನ ಪಡೆದು ತೊಟ್ಟಿಲು ತೂಗುತ್ತಾರೆ.

## ಶಿಖಾಪುರ ದೇಗುಲ ಆವರಿಸಿದ ಕೊಟ್ಟೂರೇಶ

ಕೊಟ್ಟೂರೇಶ್ವರರು ಒಮ್ಮೆ ದೇಶ ಸಂಚಾರ ಮಾಡುತ್ತಾ ಶಿಖಾಪುರಕ್ಕೆ ಬಂದಾಗ ರಾತ್ರಿ ಆಗಿರುತ್ತದಂತೆ, ತಮಗೆ ತಂಗಲು ಸ್ಥಳ ನೀಡುವಂತೆ ಶ್ರೀ ವೀರಭದ್ರೇಶ್ವರ ಸ್ವಾಮಿ ಬಳಿ ಕೇಳಿದಾಗ ಅದಕ್ಕೆ ಒಪ್ಪಿದ ವೀರಭದ್ರೇಶ್ವರರು ತಮ್ಮ ದೇವಸ್ಥಾನದಲ್ಲಿ ಮಲಗಲು ಸ್ಥಳವನ್ನು ನೀಡುತ್ತಾರೆ. ಬೆಳಗಾಗುವ ಹೊತ್ತಿಗೆ ಸಂಪೂರ್ಣ ಇಡಿ ದೇಗುಲವನ್ನೇ ಆವರಿಸಿದ ಕೊಟ್ಟೂರೇಶ್ವರರು ಶ್ರೀ ವೀರಭದ್ರ ಸ್ವಾಮಿಗೆ ಸ್ಥಳವೇ ಇಲ್ಲದಂತೆ ಮಾಡಿಬಿಡುತ್ತಾರಂತೆ.

ಆಗ ವೀರಭದ್ರೇಶ್ವರ ಸ್ವಾಮಿ ಈ ಕುರಿತು ಕೇಳಿದಾಗ, ಗಣಾಧೀಶ ಕೊಟ್ಟೂರೇಶ್ವರ, 'ನಿಮ್ಮ ಸ್ಥಳವನ್ನು ನನಗೆ ನೀಡಿ, ನೀವು ಕೊಡದಗುಡ್ಡ ಕ್ಷೇತ್ರಕ್ಕೆ ಹೋಗಿ ನೆಲೆಸಿರಿ. ಅಲ್ಲದೇ ಆ ಸ್ಥಳವನ್ನು ಮತ್ತೆ ನೀವು ಯಾರಿಗೂ ಕೊಡಬಾರದು. ಆ ಕ್ಷೇತ್ರವು 'ಕೊಡದಗುಡ್ಡ'ದ ಶ್ರೀ ವೀರಭದ್ರೇಶ್ವರ ಸ್ವಾಮಿ ಪುಣ್ಯಕ್ಷೇತ್ರವಾಗಿ ಪ್ರಖ್ಯಾತವಾಗಲಿ. ನೀವು ನನಗೆ ಕೊಟ್ಟ ಈ 'ಶಿಖಾಪುರ' ಇನ್ನು ಮುಂದೆ 'ಕೊಟ್ಟೂರು' ಎಂದು ಹೆಸರಾಗಲಿದೆ' ಎಂದರಂತೆ.

## ಸದಾ ಪೂಜಿಸಲ್ಪಡುವ ಶ್ರೀ ಗುರು

ಶ್ರಾವಣ ಮಾಸದಲ್ಲಿ ಶ್ರೀ ಸ್ವಾಮಿಗೆ ರುದ್ರಾಭಿಷೇಕ, ಕಾರ್ತಿಕ ಮಾಸದಲ್ಲಿ ಲಕ್ಷ ದೀಪೋತ್ಸವ ಬಹು ವಿಜೃಂಭಣೆಯಿಂದ ಜರುಗುವುದಲ್ಲದೇ, ಪ್ರತಿ ಅಮಾವಾಸ್ಯೆಯಲ್ಲಿ ಸಹಸ್ರಾರು ಜನ ಆಗಮಿಸಿ ದೇವರ ದರ್ಶನ ಪಡೆಯುತ್ತಾರೆ. ಹೀಗೆ ಸದಾ ಜನರಿಂದ ಪೂಜಿಸಲ್ಪಡುವ ಶ್ರೀ ಗುರು ಕೊಟ್ಟೂರೇಶ್ವರರ ಕಾರಣದಿಂದಾಗಿ ಕೊಟ್ಟೂರು ಪಟ್ಟಣವು ಧಾರ್ಮಿಕ ಮತ್ತು ವಾಣಿಜ್ಯ ಕೇಂದ್ರವಾಗಿ ಕಂಗೊಳಿಸತೊಡಗಿದೆ. ಭಕ್ತರು ಮತ್ತು ವ್ಯಾಪಾರ ವಹಿವಾಟು ಮಾಡುವ ಜನರ ಬಹುದಿನದ ಬೇಡಿಕೆಯಿಂದಾಗಿ ರೈಲ್ವೇ ಇಲಾಖೆಯೂ ಸಹ ಈಗಾಗಲೇ ಕೆಲವು ವರ್ಷಗಳಿಂದ ಹರಿಹರ-ಕೊಟ್ಟೂರು ಮಾರ್ಗದಲ್ಲಿ ರೈಲನ್ನು ಓಡಿಸುತ್ತಿದೆ. ದಾವಣಗೆರೆ ಜನರೂ ಸಹ ಈ ಸೌಲಭ್ಯ ಬಳಸಿಕೊಳ್ಳುತ್ತಿದ್ದಾರೆ.

## ನಾಡಿನೆಲ್ಲೆಡೆ ಶ್ರೀ ಗುರುವಿನ ದೇಗುಲ-ಮಠಗಳು

ಶ್ರೀ ಕೊಟ್ಟೂರು ಬಸವೇಶ್ವರ ಸ್ವಾಮಿ ಕೊಟ್ಟೂರಿಗೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದ ಅನೇಕ ಕಡೆ ಅವರ ದೇವಸ್ಥಾನಗಳು ನಿರ್ಮಾಣವಾಗಿವೆ. ಪಕ್ಕದ ಉಜ್ಜಯಿನಿ, ಅಂಬಳಿ, ಗುಣಸಾಗರ, ಕೆ.ಗಜಾಪುರ, ಕುಪ್ಪಿನಕೆರೆ, ಕೋಗಳಿ, ಚಿರಿಬಿ ಗ್ರಾಮಗಳಲ್ಲಿ ಇವೆ.

ಮುಖ್ಯವಾಗಿ ಬಹಳಷ್ಟು ಭಕ್ತರನ್ನು ಹೊಂದಿರುವ ದಾವಣಗೆರೆಯಲ್ಲಿನ ಹಳೇಪೇಟೆ, ಮಾಗಾನಹಳ್ಳಿ ರಸ್ತೆ, ಮತ್ತು ಕೊಟ್ಟೂರೇಶ್ವರ ಬಡಾವಣೆಯಲ್ಲಿಯೂ ದೇವಸ್ಥಾನಗಳಿವೆ.

ಕೋಲಾರದ ಕೊಟ್ಟೂರು ಗ್ರಾಮದ ಬಳಿ ಇರುವ ಬಸವಾಪುರ, ಚಾಮರಾಜ ನಗರ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಮೈಸೂರು ಜಿಲ್ಲೆಯ ಅರಸಿಕೆರೆ, ಕಲ್ಬುರ್ಗಿಯ ಸೇಡಂ ಗ್ರಾಮದಲ್ಲಿ, ರಾಣೇಬೆನ್ನೂರು, ಐರಣಿ, ಕುಂದೂರು, ಹೊಸಪೇಟೆ, ಗಂಗಾವತಿ, ಹೂವಿನಹಡಗಲಿ, ಉತ್ತಂಗಿ, ಶಿವಲಿಂಗನಹಳ್ಳಿ, ನವಿಲೆ, ಬುದನೂರು ಕೂಲಹಳ್ಳಿ, ಹರ್ಲಾಪುರ ತಂಬ್ರಹಳ್ಳಿ, ಶಿಕಾರಿಪುರದ ನಿಂಬೇಗೊಂದಿ ಮತ್ತಿತರೆ ಕಡೆಗಳಲ್ಲಿಯೂ ಶ್ರೀಗುರು ಕೊಟ್ಟೂರೇಶ್ವರರ ದೇವಸ್ಥಾನ ಮತ್ತು ಮಠಗಳು ಇರುತ್ತವೆ.

## ಕೊಟ್ಟೂರು ರಥೋತ್ಸವದ ಸಂಭ್ರಮವನ್ನು ದಾವಣಗೆರೆಯಲ್ಲಿ ನೋಡಬೇಕು..!

ಕೊಟ್ಟೂರಿನಲ್ಲಿ ರಥೋತ್ಸವ ಜರುಗಿದರೆ, ಅದರ ಸಂಭ್ರಮ ದಾವಣಗೆರೆಯಲ್ಲಿ ನೋಡಬೇಕು. ಇಲ್ಲಿ ವರ್ಷದಿಂದ ವರ್ಷಕ್ಕೆ ಪಾದಯಾತ್ರಿಗಳ ಸಂಖ್ಯೆ ಹೆಚ್ಚುತ್ತಲೇ ಸಾಗಿದೆ. ಹರೆಯದ ಯುವಕ-ಯುವತಿಯರಿಂದ ಹಿಡಿದು ವೃದ್ಧರೂ ಸಹ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿನ ಶ್ರೀ ಗುರು ಕೊಟ್ಟೂರು ಬಸವರಾಜೇಂದ್ರ ಪಾದಯಾತ್ರೆ ಟ್ರಸ್ಟ್ ಕಳೆದ 44 ವರ್ಷಗಳಿಂದಲೂ ಪಾದಯಾತ್ರೆ ಕಾರ್ಯಕ್ರಮವನ್ನು 'ನಡೆಸಿಕೊಂಡು ಬರುತ್ತಿದೆ. ಮಠ, ಮಾನ್ಯರಿಂದ ಆಶೀರ್ವಾದ ಪಡೆದು ಪಾದಯಾತ್ರಿಗಳು ದೇವರ ಸ್ಮರಣೆ, ಭಜನೆ ಮಾಡುತ್ತಾ ಕೊಟ್ಟೂರಿನತ್ತ ಹೆಜ್ಜೆ ಹಾಕುತ್ತಾರೆ.

ಪಾದಯಾತ್ರಿಗಳಿಗೆ ಬೀಳ್ಕೊಡುವ ಈ ಸಂದರ್ಭವೇ ಜಾತ್ರೆಯಂತಾಗಿ ರುತ್ತದೆ, ಬಹಳಷ್ಟು ಭಕ್ತರು ಯಾತ್ರಿಗಳಿಗೆ ಹಣ್ಣು ಹಂಚುತ್ತಾರೆ, ಬಿಸ್ಕತ್, ನೀರಿನ ಬಾಟಲು, ಚಿತ್ರಾನ್ನ, ಉಪ್ಪಿಟ್ಟು ಅಷ್ಟೇ ಏಕೆ ಕೆಲವು ಭಕ್ತರು ರಸ್ತೆಯಲ್ಲಿಯೇ ಹಂಚನ್ನಿಟ್ಟು ಬಿಸಿ ಬಿಸಿ ದೋಸೆಯನ್ನು ಹಾಕಿಸಿ ಯಾತ್ರಿಗಳಿಗೆ ಕೊಡುತ್ತಾರೆ.

ಪಾದಯಾತ್ರಿಗಳು ಸಾಗುವ ಕೊಟ್ಟೂರು ಮಾರ್ಗ ಮಧ್ಯೆ ಅಲ್ಲಲ್ಲಿ ಅಯಾಯ ಗ್ರಾಮದ ಜನರು ನೀರು, ಮಜ್ಜಿಗೆ, ಶರಬತ್ತು, ಹಣ್ಣು-ಹಂಪಲು, ಉಪಹಾರದ ವ್ಯವಸ್ಥೆ ಮಾಡಿದರೆ, ವೈದ್ಯರು, ನರ್ಸ್‌ಗಳು ಮತ್ತು ಸೇವಾಕಾರ್ಯಕರ್ತರ ತಂಡಗಳು ಪಾದಯಾತ್ರಿಗಳ ಸೇವೆಯಲ್ಲಿ ನಿರತವಾಗಿರುತ್ತವೆ. ಇದನ್ನು ಅವರು ದೇವರ ಸೇವೆಯೆಂದೇ ಭಾವಿಸುತ್ತಾರೆ.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಅರೇಮಲ್ಲಾಪುರ, ಮೇಡ್ಲೇರಿ, ರಾಹುತನಕಟ್ಟಿ, ಯಕ್ಲಾಸಪುರ, ಸೋಮಲಾಪುರ, ಕೊಣನತಂಬಿಗಿ, ಹಿರೇಬಿದರಿ, ಐರಣಿ, ವೈ.ಟಿ. ಮೆಡ್ಲೇರಿ, ಬೇಲೂರು, ಹೀಲದಹಳ್ಳಿ, ಅಂಕಸಾಪುರ, ಉದಗಟ್ಟಿ, ಯಲ್ಲಾಪುರ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.


ರಾಣೇಬೆನ್ನೂರಿಗೆ ಕುಡಿಯುವ ನೀರು ಸರಬರಾಜಿನ ಮುದೇನೂರು ವಾಟರ್ ಸಪ್ಲೇ, ವೆಂಕಟೇಶ್ವರ ಹಾರ್ಚರಿ, ರಾಮ್‌ಕೋ ಫ್ಯಾಕ್ಟರಿ ಹಾಗೂ ಚಳಗೇರಿ, ಕರೂರು, ಹುಣಸಿಕಟ್ಟಿ, ಎಣ್ಣಿಹೊಸಳ್ಳಿ, ಹೂಲಿಕಟ್ಟಿ, ವಡೆರಾಯನಹಳ್ಳಿ, ನದಿಹರಳಹಳ್ಳಿ ಗ್ರಾಮಗಳಲ್ಲಿ ಇಂದು 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ನಗರದಲ್ಲಿ ಇಂದು ಸಾಮೂಹಿಕ ಕಲ್ಯಾಣ ಮಹೋತ್ಸವ

ಶ್ರೀ ಗುರು ರಾಮದಾಸಸ್ವಾಮಿ ಅಧ್ಯಾತ್ಮಿಕ ಸೇವಾ ಟ್ರಸ್ಟ್‌ನಿಂದ 32ನೇ ವರ್ಷದ ಶ್ರೀಗುರು ಮಾದಾರ ಚನ್ನಯ್ಯಸ್ವಾಮಿಯವರ ಜಯಂತ್ಯೋತ್ಸವ, ಶ್ರೀಗುರು ರಾಮದಾಸ ಸ್ವಾಮಿಗಳ 65ನೇ ವರ್ಷದ ಮತ್ತು ಶ್ರೀ ಮಲ್ಲಯ್ಯ ಸ್ವಾಮಿಗಳ 21ನೇ ವರ್ಷದ ಹಾಗೂ ಶ್ರೀ ಕೊಂಡಯ್ಯ ಸ್ವಾಮಿಗಳ 17ನೇ ವರ್ಷದ ಪುಣ್ಯಾರಾಧನೆ ಹಾಗೂ 32ನೇ ವರ್ಷದ ಸಾಮೂಹಿಕ ಕಲ್ಯಾಣ ಮಹೋತ್ಸವವು ಇಂದು ಬೆಳಿಗ್ಗೆ 11.30 ಕ್ಕೆ ಗಾಂಧಿನಗರದಲ್ಲಿರುವ ಶ್ರೀ ಹೊರಟ್ಟಿ ದುಗಾಂಬಿಕಾ ದೇವಸ್ಥಾನದ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ಜರುಗಲಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ, ಪಾಂಡೋಮಟ್ಟಿ ವಿರಕ್ತಮಠದ ಶ್ರೀ ಗುರುಬಸವ ಸ್ವಾಮೀಜಿ, ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ, ಶ್ರೀ ಷಡಾಕ್ಷರಿಮುನಿ ಸ್ವಾಮೀಜಿ ವಹಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಜಿ ಸಚಿವರುಗಳಾದ ಎಸ್.ಎಸ್. ಮಲ್ಲಿಕಾರ್ಜುನ್, ಹೆಚ್. ಆಂಜನೇಯ, ವಿಧಾನ ಪರಿಷತ್ ಸದಸ್ಯ ಕೆ. ಅಬ್ದುಲ್ ಜಬ್ಬಾರ್, ಜವಳಿ ಉದ್ಯಮಿ ಬಿ.ಸಿ. ಉಮಾಪತಿ, ಮೇಯರ್ ಜಯಮ್ಮ ಗೋಪಿನಾಯ್ಕ್, ಉಪ ಮೇಯರ್ ಗಾಯತ್ರಿ ಖಂಡೋಜಿರಾವ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಟ್ರಸ್ಟ್‌ನ ಅಧ್ಯಕ್ಷ ಬಿ.ಹೆಚ್. ವೀರಭದ್ರಪ್ಪ ತಿಳಿಸಿದ್ದಾರೆ.









### ಬಾಲ್ಯ ವಿವಾಹದ ವಿರುದ್ಧ ಅಭಿಯಾನ

## ಸಾವಿರಾರು ಜನರ ವಶಕ್ಕೆ ಹೈಕೋರ್ಟ್ ಆಕ್ಷೇಪ

ಗುವಾಹತಿ, ಫೆ. 15 – ಬಾಲ್ಯ ವಿವಾಹದ ವಿರುದ್ಧ ಅಭಿಯಾನ ನಡೆಸುತ್ತಿರುವ ಅಸ್ಸಾಂ ಸರ್ಕಾರ, ದೊಡ್ಡ ಸಂಖ್ಯೆಯಲ್ಲಿ ಜನರನ್ನು ಬಂಧಿಸುತ್ತಿರುವುದರಿಂದ ಜನರ ಖಾಸಗಿ ಜೀವನದಲ್ಲಿ ಬಿರುಗಾಳಿ ಎದ್ದಿದೆ ಎಂದು ಗೌಹಾತಿ ಹೈಕೋರ್ಟ್ ಆಕ್ಷೇಪಿಸಿದೆ.

ಇಂತಹ ಪ್ರಕರಣಗಳಲ್ಲಿ ಆರೋಪಿಗಳನ್ನು ಕಸ್ಟಡಿಗೆ ಪಡೆದು ವಿಚಾರಣೆಗೆ ಒಳಪಡಿಸುವ ಅಗತ್ಯವಿಲ್ಲ. ಈ ಪ್ರಕರಣಗಳಲ್ಲಿ ಪೋಕ್ಸೋ ಹಾಗೂ ಅತ್ಯಾಚಾರದ ಆರೋಪ ದಾಖಲಿಸುವ ಅಗತ್ಯವಿಲ್ಲ. ಈ ರೀತಿಯ ಆರೋಪ ಮಾಡುವುದು ವಿಲಕ್ಷಣವಾಗಿದೆ ಎಂದು ಹೈಕೋರ್ಟ್ ಹೇಳಿದೆ. ಜಾಮೀನಿಗಾಗಿ ಆರೋಪಿಗಳು ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿ ಸುಮನ್ ಶ್ಯಾಮ್ ಅವರು ಈ ಟಿಪ್ಪಣಿ ಮಾಡಿದ್ದಾರೆ. ತಕ್ಷಣವೇ ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುವಂತೆ ತಿಳಿಸಿದ್ದಾರೆ.

ಈ ವಿಷಯಗಳಲ್ಲಿ ಕಸ್ಟಡಿ ವಿಚಾರಣೆಯ ಅಗತ್ಯವಿಲ್ಲ. ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ. ಯಾರಾದರೂ ತಪ್ಪು ಮಾಡಿದ್ದಾರೆ ಎಂದು ಕಂಡು ಬಂದರೆ ಆರೋಪ ಪಟ್ಟಿ ದಾಖಲಿಸಲಿ. ಅವರು ವಿಚಾರಣೆ ಎದುರಿಸಲಿ, ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ ಎಂದು ನ್ಯಾಯಮೂರ್ತಿ ಹೇಳಿದ್ದಾರೆ.

ಇವೇನು ಮಾದಕ, ಕಳ್ಳಸಾಗಣೆ ಇಲ್ಲವೇ ಕಳ್ಳತನದ ಪ್ರಕರಣಗಳಲ್ಲ. ಈ ಬಂಧನಗಳಿಂದ ಜನರ ಖಾಸಗಿ ಜೀವನದಲ್ಲಿ ಬಿರುಗಾಳಿ ಏಳುತ್ತಿದೆ. ಇವರನ್ನು ಬಂಧಿಸುವುದು ಒಳ್ಳೆಯ ವಿಚಾರವಲ್ಲ ಎಂದು ನ್ಯಾಯಾಲಯ ಹೇಳಿದೆ.

ಫೆಬ್ರವರಿ 14ರವರೆಗೆ ರಾಜ್ಯದಲ್ಲಿ 3,031 ಜನರನ್ನು ಬಾಲ್ಯವಿವಾಹದ ಆರೋಪದ ಮೇಲೆ ವಶಕ್ಕೆ ತೆಗೆದುಕೊಳ್ಳಲಾಗಿದೆ. ಇದುವರೆಗೂ 4,225 ಬಾಲ್ಯವಿವಾಹ ಪ್ರಕರಣಗಳನ್ನು ದಾಖಲಿಸಲಾಗಿದೆ. ಫೆಬ್ರವರಿ 3ರಿಂದ ಬಾಲ್ಯ ವಿವಾಹದ ವಿರುದ್ಧ ಕ್ರಮ ಜರುಗಿಸಲು ಆರಂಭಿಸಲಾಗಿತ್ತು.

ಬಂಧಿತರನ್ನು ಇರಿಸಲು ಜೈಲುಗಳಲ್ಲಿ ಜಾಗವೂ ಇಲ್ಲ. ಸರ್ಕಾರ ದೊಡ್ಡ ಜೈಲುಗಳನ್ನು ನಿರ್ಮಿಸಲಿ ಎಂದೂ ನ್ಯಾಯಮೂರ್ತಿ ಶ್ಯಾಮ್ ಅವರು ಹೇಳಿದ್ದಾರೆ.

ಆರೋಪಿಗಳ ವಿರುದ್ಧ ಪೋಕ್ಸೋ ಹಾಗೂ ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಡಿ. ದಾಸ್, ಜಾಮೀನಿಗೆ ವಿರೋಧಿಸಿದರು. ಈ ವಾದ ಒಪ್ಪದ ನ್ಯಾಯಾಲಯ, ಕೇವಲ ಪೋಕ್ಸೋ ಕಾಯ್ದೆಯ ಅಂಶಗಳನ್ನು ಸೇರಿಸಲಾಗಿದೆ ಎಂದ ಮಾತ್ರಕ್ಕೆ ಇಲ್ಲೇನು ನಡೆಯುತ್ತಿದೆ ಎಂಬುದನ್ನು ನ್ಯಾಯಮೂರ್ತಿಗಳು ನೋಡಲು ಸಾಧ್ಯವಿಲ್ಲವೇ? ಎಂದು ಪ್ರಶ್ನಿಸಿತು.

ನ್ಯಾಯಾಲಯ ಯಾರನ್ನೂ ದೋಷಮುಕ್ತ ಮಾಡುತ್ತಿಲ್ಲ. ಪ್ರಕರಣದ ತನಿಖೆಗೂ ತಡೆಯುತ್ತಿಲ್ಲ. ಆದರೆ ಇಲ್ಲಿ ಅತ್ಯಾಚಾರ ಪ್ರಕರಣದ ಪ್ರಶ್ನೆಯೇ ಬರುವುದಿಲ್ಲ. ಇದೆಲ್ಲ ವಿಲಕ್ಷಣ ಆರೋಪಗಳು ಎಂದು ನ್ಯಾಯಮೂರ್ತಿ ಶ್ಯಾಮ್ ಹೇಳಿದರು.

## ಸುಳ್ಳು ದೂರು ನೀಡಿ ಪೊಲೀಸ್ ಅತಿಥಿಯಾದ ಯುವಕ

ದಾವಣಗೆರೆ, ಫೆ.15- ನನ್ನನ್ನು ಅಪಹರಿಸಿ ಹಣ ಕಸಿದುಕೊಂಡಿದ್ದಾರೆಂದು ಸುಳ್ಳು ದೂರು ನೀಡಿದ್ದ ಯುವಕ ನಂತರ ಪೊಲೀಸರ ಅತಿಥಿಯಾದ ಘಟನೆ ನಡೆದಿದೆ.

ಎಸ್.ಎಸ್.ಎಂ. ನಗರದ ಅಮಿರ್ ಖಾನ್ ಕಳೆದ ಜ.30 ರಂದು ಆಜಾದ್ ನಗರ ಠಾಣೆಗೆ ಬಂದು ಯಾರೋ ಮೂರು ಜನ ನನಗೆ ಚಾಕು ತೋರಿಸಿ ಅಪಹರಿಸಿ, ಮೊಬೈಲ್ ಕಿತ್ತುಕೊಂಡು ಫೋನ್ ಪೇ ಮೂಲಕ 35 ಸಾವಿರ ರೂ. ಹಣವನ್ನು ಖಾತೆಗೆ ಕಳುಹಿಸಿಕೊಂಡಿದ್ದಾರೆ ಎಂದು ದೂರು ನೀಡಿದ್ದ.

ದೂರು ದಾಖಲಿಸಿಕೊಂಡಿದ್ದ ಪೊಲೀಸರು ವಿಚಾರಣೆ ನಡೆಸಿದಾಗ, ಅಮಿರ್ ತನ್ನ ಖಾತೆಯಲ್ಲಿದ್ದ ಹಣವನ್ನು ಮೊಬೈಲ್ ಆನ್ ಲೈನ್ ಗೇಮ್‌ಗೆ ಬಳಸಿ ಸೋತು, ತಂದೆ ಬಯ್ಯುತ್ತಾರೆಂದು ತಿಳಿದು ಸುಳ್ಳು ದೂರು ಕೊಟ್ಟಿರುವುದು ತಿಳಿದು ಬಂದಿದೆ.

ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ದುರುಪಯೋಗ ಪಡಿಸಿಕೊಂಡ ಅಮಿರ್ ಖಾನ್ ವಿರುದ್ಧ ಪೊಲೀಸರು ನ್ಯಾಯಾಲಯಕ್ಕೆ ದೂರು ನೀಡಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ.

## ಮಲೇಬೆನ್ನೂರು: 64 ಮಕ್ಕಳಲ್ಲಿ ಹೃದಯ ಸಂಬಂಧಿ ಕಾಯಿಲೆ

ಮಲೇಬೆನ್ನೂರು, ಫೆ. 15- ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಹರಿಹರ ತಾಲ್ಲೂಕಿನಲ್ಲಿ ನಿಯಮಿತವಾಗಿ ಕೈಗೊಂಡ ಆರೋಗ್ಯ ತಪಾಸಣೆಯಲ್ಲಿ 64 ಶಾಲಾ ಮಕ್ಕಳು ಹೃದಯ ಸಂಬಂಧಿ ಕಾಯಿಲೆ ಪೀಡಿತರಾಗಿರುವುದು ಕಂಡು ಬಂದಿದೆ ಎಂದು ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಹಾಗೂ ಹರಿಹರ ತಾಲ್ಲೂಕು ನೋಡಲ್ ಅಧಿಕಾರಿ ಡಾ. ನಟರಾಜ್ ತಿಳಿಸಿದರು.



ಹನಗವಾಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ವಿಶ್ವ ಜನ್ಮಜಾತ ಹೃದಯ ದೋಷ ಜಾಗೃತ ದಿನಾಚರಣೆಯಲ್ಲಿ ಭಾಗ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ (ಆರ್‌ಬಿಎಸ್‌ಕೆ) ಆರೋಗ್ಯ ತಪಾಸಣೆ ನಡೆಸಲಾಗಿತ್ತು. 64 ಕಾಯಿಲೆ ಪೀಡಿತರ ಪೈಕಿ 6 ಮಕ್ಕಳಿಗೆ ಶಸ್ತ್ರ ಚಿಕಿತ್ಸೆ ಮಾಡಿಸಲಾಗಿದೆ. ಉಳಿದ ಮಕ್ಕಳನ್ನು ಔಷಧ ನೀಡುವ ಮೂಲಕ ಗುಣಪಡಿಸಲಾಗಿದೆ. ಹುಟ್ಟಿನಿಂದಲೇ ಕೆಲವು ಕಾಯಿಲೆಗಳು ಮಕ್ಕಳಲ್ಲಿ ಇರಬಹುದು. ಅದನ್ನು ಬಾಲ್ಯಾವಸ್ಥೆಯಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಕೊಡಿಸಿದರೆ ಮುಂದಿನ ಸಮಸ್ಯೆಗಳಿಂದ ಪಾರಾಗಲು ಹಾಗೂ ಆರೋಗ್ಯವಂತರಾಗಲು ಸಾಧ್ಯ ಎಂದು ಹೇಳಿದರು.

ಚಿತ್ರದುರ್ಗದ ಡಿಜಿಟಲ್ ಹೆಲ್ತ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ ರಿಸರ್ಚ್ ಅಂಡ್ ಟ್ರೈನಿಂಗ್ ಸೆಂಟರ್‌ನ ಡಾ. ಪಿ.ಎಸ್ ಬಾಲು ಮಾತನಾಡಿ ನಮ್ಮ ಸಂಸ್ಥೆಯಿಂದ ತಾಲ್ಲೂಕು ಆರೋಗ್ಯ ಇಲಾಖೆಯ ಆರ್‌ಬಿಎಸ್‌ಕೆಯ ಎರಡು ತಂಡ ಗಳಿಗೆ ಎರಡು ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ (ಎಐ) ಸ್ಟೆತೋಸ್ಕೋಪ್ ಕೊಡುಗೆಯಾಗಿ ನೀಡಲಾಗಿದೆ. ಈ ಮೂಲಕ ಶಾಲಾ ಮಕ್ಕಳ ಹೃದಯ ತಪಾಸಣೆಯನ್ನು ಸುಲಭ ಹಾಗೂ ನಿಖರವಾಗಿ ಮಾಡಲು ಸಹಾಯಕ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ್ ಮಾತನಾಡಿ, ಕಾಯಿಲೆ ಪೀಡಿತ ಮಕ್ಕಳ ಚಿಕಿತ್ಸೆಗೆ ಆರ್‌ಬಿಎಸ್‌ಕೆ ಯೋಜನೆಯಡಿ ಉಚಿತ ಚಿಕಿತ್ಸೆ ಲಭ್ಯವಿದೆ ಎಂದು ಹೇಳಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಚಂದ್ರಮೋಹನ್, ವೈದ್ಯಾಧಿಕಾರಿಗಳಾದ ಡಾ. ಶಿಲ್ಪ, ಡಾ. ವಿಶ್ವನಾಥ್, ಡಾ. ಮಹ್ಮದ್ ಅಲಿ, ಡಾ.ಮಮತಾ, ಡಾ. ಗಿರಿಜಾ, ತಾ ಹಿರಿಯ ಆರೋಗ್ಯ ನಿರೀಕ್ಷಣಾ ಧಿಕಾರಿ ಎಂ.ಉಮ್ಮಣ್ಣ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಟಿ. ನಾಗರಾಜ್, ಗ್ರಾ.ಪಂ. ಉಪಾಧ್ಯಕ್ಷ ಎಸ್ ಎಂ ರೇವಣಸಿದ್ದಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಂಗ ಶಿವರಾತ್ರಿ : ನಗರದಲ್ಲಿ ನಾಳೆ ನಾಲ್ಕು ನಗೆ ನಾಟಕಗಳ ಪ್ರಸ್ತುತಿ

ದಾವಣಗೆರೆ, ಫೆ. 15- ವೃತ್ತಿ ರಂಗಭೂಮಿ ರಂಗಾಯಣ, ಚಿರಂತನ ಸಂಸ್ಥೆ (ದಾವಣಗೆರೆ) ಮತ್ತು ಗುರು ಇನ್‌ಸ್ಟಿಟ್ಯೂಟ್ (ಹುಬ್ಬಳ್ಳಿ) ಇವರ ಸಂಯುಕ್ತಾಶ್ರಯದಲ್ಲಿ ರಂಗಶಿವರಾತ್ರಿ- 2023 ಎಂಬ ಶೀರ್ಷಿಕೆಯಡಿ ನಾಲ್ಕುದಿನ ನಾಲ್ಕು ನಗೆ ನಾಟಕಗಳ ಪ್ರಸ್ತುತಿ 'ರಂಗೋತ್ಸವ' ಕಾರ್ಯಕ್ರಮವನ್ನು ನಾಡಿದ್ದು ದಿನಾಂಕ 17 ರಿಂದ 20 ರವರೆಗೆ ನಗರದ ಚಿಂದೋಡಿ ಕಲಾ ಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಪ್ರತಿ ದಿನ ಸಂಜೆ 6.30 ಕ್ಕೆ ನಾಟಕ ಪ್ರದರ್ಶನವಿದೆ. ನಾಡಿದ್ದು ದಿನಾಂಕ 17 ರ ಶುಕ್ರವಾರ 'ರಾಶಿ ಚಕ್ರ' ಏಕ ವ್ಯಕ್ತಿ ಹಾಸ್ಯ ರಂಗ ಪ್ರಯೋಗ, ದಿನಾಂಕ 18 ರಂದು 'ಆಲ್ ದಿ ಬೆಸ್ಟ್' ಸುಂದರ ಕನ್ನಡ ನಗೆ ನಾಟಕ, ಫೆ. 19 ಮತ್ತು 20 ರಂದು 'ಸೂಪರ್ ಸಂಸಾರ' ಹೊಚ್ಚ ಹೊಸ ನಗೆ ನಾಟಕ ಪ್ರದರ್ಶನಗೊಳ್ಳಲಿದೆ.

ಲವ್‌ಫುಡ್, ರಸವಂತಿ ಕೂಲ್ ಡ್ರಿಂಕ್ಸ್, ಹಳೆಮನೆ ಹೋಟೆಲ್, ಆಹಾರ್-2000 , ಚಿರಂತನ ಸಂಸ್ಥೆಯಲ್ಲಿ ಟಿಕೆಟ್‌ಗಳು ಲಭ್ಯವಿವೆ.

## ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ ಉಳಿಸಲು ಕ್ರಮ

ಬೆಂಗಳೂರು, ಫೆ. 15 - ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ (ವಿಐಎಸ್‌ಎಲ್) ಯನ್ನು ಉಳಿಸಲು ಕ್ರಮ ಕೈಗೊಳ್ಳುವುದಾಗಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನಸಭೆಯಲ್ಲಿಂದು ಭರವಸೆ ನೀಡಿದರು. ಶೂನ್ಯ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯ ಬಿ.ಕೆ.ಸಂಗಮೇಶ್ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಸಚಿವರು, ಕಾರ್ಖಾನೆ ಮುಚ್ಚದಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಹೇಗಾದರೂ ಮಾಡಿ ಕಾರ್ಖಾನೆ ಉಳಿಸುವ ಪ್ರಯತ್ನ ಮಾಡುತ್ತೇವೆ ಎಂದರು.

ಕಾರ್ಖಾನೆ ಮುಚ್ಚುವ ಪ್ರಸ್ತಾವನೆ ಸಲ್ಲಿಸಿದ್ದು, ನಿಮ್ಮ ಸರ್ಕಾರವೇ ಎಂದು ಶಾಸಕರಿಗೆ ತಿರುಗೇಟು ನೀಡಿದರು. ನಿಮ್ಮ ಬೆನ್ನನ್ನು ನೋಡಿಕೊಳ್ಳಿ ಎಂದು ಖಾರವಾಗಿ ಪ್ರತಿಕ್ರಿಯಿಸಿದರು. ಇದಕ್ಕೂ ಮುನ್ನ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಾತನಾಡಿ, ವಿಐಎಸ್‌ಎಲ್ ಕಾರ್ಖಾನೆ ಉಳಿಸಿಕೊಳ್ಳಲೇಬೇಕು. ಕೆಲಸ ಸ್ಥಗಿತವಾಗದಂತೆ ನೋಡಿಕೊಳ್ಳಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿರುವುದರ ಜತೆಗೆ ಕೇಂದ್ರ ಸರ್ಕಾರಕ್ಕೆ ಆಗ್ರಹಿಸಿ ಸ್ಥಗಿತಗೊಳ್ಳದಂತೆ ಕ್ರಮ ಜರುಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಈ ವಿಚಾರಕ್ಕ ದನಿಗೂಡಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕ ಬಂಡೆಪ್ಪ ಕಾಶೆಂಪೂರ್ ಹಾಗೂ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಅವರು, ವಿಐಎಸ್‌ಎಲ್ ಕಾರ್ಖಾನೆ ಮುಚ್ಚದಂತೆ ಕ್ರಮ ಕೈಗೊಳ್ಳಲು ಸರ್ಕಾರವನ್ನು ಆಗ್ರಹಿಸಿದರು.

## 'ಸ್ಮಾರ್ಟ್' ಉದ್ದೇಶ ಮರೆತು ಮುಗಿದ ಯೋಜನೆ

(1ನೇ ಪುಟದಿಂದ) ಬಿಡಲಾಯಿತು.

ಆಧುನಿಕ ನಗರದ ಜನತೆಯ ದೊಡ್ಡ ಸಮಸ್ಯೆಗಳೆಂದರೆ ಉದ್ಯೋಗ, ವಸತಿ, ಶಿಕ್ಷಣ ಹಾಗೂ ಆರೋಗ್ಯ. ಇವುಗಳಿಗಾಗಿ ಜನರು ಪರಿತಪಿಸುತ್ತಿದ್ದಾರೆ. ಅದರಲ್ಲೂ ಕೊರೊನಾ ಕಾಲ ಆರೋಗ್ಯ ಮತ್ತು ಶಿಕ್ಷಣಕ್ಕೆ ತಂದಿಟ್ಟ ಸಮಸ್ಯೆ ಒಂದೆರಡಲ್ಲ. ಈ ಸಮಸ್ಯೆಗಳಿಗೆ ಸ್ಮಾರ್ಟ್ ಉತ್ತರ ಸಿಕ್ಕಿತೇ?

ನಗರಗಳಲ್ಲಿ ಒಂದು ಬೆಚ್ಚನೆಯ ಗೂಡು ಕಂಡುಕೊಳ್ಳುವುದು ಸುಲಭದ ಮಾತಲ್ಲ. ಎಷ್ಟೋ ಜನರ ಆಯುಷ್ಯವೇ ಸವೆದು ಹೋದರೂ ಒಂದು ಸೂರು ಸಿಗದು. ಸರ್ಕಾರಿ ಶಿಕ್ಷಣ ಸರಿ ಇಲ್ಲ ಎಂದು ಖಾಸಗಿ ಮೊರೆ ಹೋದವರು ಅಲ್ಲಿ ಶುಲ್ಕ ಪಾವತಿಸಲು ಹೆಣಗಾಡುತ್ತಿದ್ದಾರೆ. ಇಂತಹ ಸಮಸ್ಯೆಗಳಿಗೆ ಪರಿಹಾರ ಇಲ್ಲದೇ ಅದೆಂತಹ ಸ್ಮಾರ್ಟ್ ನಗರ ನಿರ್ಮಾಣ ಸಾಧ್ಯ?

ಸ್ಮಾರ್ಟ್ ಸಿಟಿಯ ಆರಂಭದ ದಿನಗಳ ಪ್ರಚಾರ ಎಷ್ಟರ ಮಟ್ಟಿಗೆ ಆಯಿತು ಎಂದರೆ, ನಗರದಲ್ಲಿ ಏನೇ ಕಾಮಗಾರಿ ನಡೆದರು ಅದು ಸ್ಮಾರ್ಟ್ ಸಿಟಿಯದ್ದೇ ಎಂದು ಜನ ಭಾವಿಸುವಂತಾಯಿತು. ಆದರೆ, ಯಾವುದೇ ಕಾಮಗಾರಿಗಳಲ್ಲಿ ಏನೇ ಸಮಸ್ಯೆಯಾದರೂ ಸ್ಮಾರ್ಟ್ ಸಿಟಿಯನ್ನೇ ದೂರುವಂತಾಗಿದ್ದು ಬೇರೆ ಮಾತು.

ಸ್ಮಾರ್ಟ್ ಸಿಟಿ ಅವಧಿ ಮುಗಿದ ನಂತರ, ಈ ಯೋಜನೆ ಮೂಲಕ ಕಲ್ಪಿಸಿರುವ ಸೌಲಭ್ಯಗಳನ್ನು ಏನು ಮಾಡಲಾಗುವುದು ಎಂಬ ಬಗ್ಗೆಯೂ ಸ್ಪಷ್ಟತೆ ಇಲ್ಲ. ಜನ ಬಳಸದ ಸೈಕಲ್, ಕೆಲಸಕ್ಕೆ ಬಾರದ ಸ್ಮಾರ್ಟ್ ಶೌಚಾಲಯಗಳನ್ನು ಮುಂದುವರೆಸಲು ಯಾರು ಹಣ ಕೊಡುತ್ತಾರೆ? ಎಂಬುದು ಗೊತ್ತಾಗುತ್ತಿಲ್ಲ.

ಒಟ್ಟಾರೆ, ನಗರಗಳಲ್ಲಿ ನಾಗರಿಕರಿಗೆ ಸುಸ್ಥಿರ ಜೀವನ ನೀಡುವ ಬೃಹತ್ ಕನಸಿನೊಂದಿಗೆ ಬಂದ ಸ್ಮಾರ್ಟ್ ಸಿಟಿಯ ಮೂಲ ಉದ್ದೇಶಗಳು ಈಡೇರುವುದಿರಲಿ, ಆ ಉದ್ದೇಶಗಳ ಬಗ್ಗೆಯೇ ಗಮನ ಹರಿಸಲಿಲ್ಲ ಎಂಬ ಅಭಿಪ್ರಾಯ ಬಂದರೆ ತಪ್ಪೇನೂ ಇಲ್ಲ. ಸ್ಮಾರ್ಟ್ ಸಿಟಿಯ ಮೂಲ ಉದ್ದೇಶ ಈಡೇರಿಕೆಗೆ ಈಗ ಇನ್ನೊಂದು ಸ್ಮಾರ್ಟ್ ಯೋಜನೆಗೆ ಕಾಯಬೇಕಿದೆ ಅಷ್ಟೇ.

## ಪಂಚರಥ ಯಾತ್ರೆಗೆ ಹಲಗೇರಿಯಲ್ಲಿ ಭವ್ಯ ಸ್ವಾಗತ

### ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಭವ್ಯ ಸ್ವಾಗತ

ರಾಣೇಬೆನ್ನೂರು, ಫೆ. 15- ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ರಾಜ್ಯಾದ್ಯಂತ ಹಮ್ಮಿಕೊಂಡಿರುವ ಪಂಚರಥ ಯಾತ್ರೆ ಬುಧವಾರ ಹಲಗೇರಿ ಗ್ರಾಮಕ್ಕೆ ಆಗಮಿಸಿದಾಗ ಭವ್ಯ ಸ್ವಾಗತ ಕೋರಲಾಯಿತು.



ಪಕ್ಷದ ಕಾರ್ಯಕರ್ತರು ಅವರಿಗೆ ಕ್ರೇನ್ ಮೂಲಕ ಹೂವಿನ ಹಾರ ಅರ್ಪಿಸುವ ಮೂಲಕ ತಮ್ಮ ಅಭಿಮಾನ ವ್ಯಕ್ತಪಡಿಸಿದರು.

ಈ ಸಮಯದಲ್ಲಿ ಜೆಡಿಎಸ್ ಧುರೀಣ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಎರಡೂ ರಾಷ್ಟ್ರೀಯ ಪಕ್ಷಗಳು ರಾಜ್ಯದ ಅಭಿವೃದ್ಧಿ ಕುರಿತು ಚಿಂತನೆ ನಡೆಸುವುದಕ್ಕಿಂತ ಪರಸ್ಪರ ಪರ್ಸೆಂಟೇಜ್ ವಿಚಾರವಾಗಿ ಆರೋಪ ಪ್ರತ್ಯಾರೋಪದಲ್ಲಿ ನಿರತವಾಗಿದ್ದು, ರಾಜ್ಯವನ್ನು ಲೂಟಿ ಹೊಡೆಯಲು ಪೈಪೋಟಿ ನಡೆಸುತ್ತಿವೆ.

ಈ ನಿಟ್ಟಿನಲ್ಲಿ ರಾಜ್ಯದ ಜನತೆ ನಮ್ಮ ಪಕ್ಷಕ್ಕೆ ಆಶೀರ್ವಾದ ಮಾಡುವ ಮೂಲಕ ಸುಭಿಕ್ಷ ಆಡಳಿತ ನೀಡಲು ಬದ್ಧರಾಗಿದ್ದೇವೆ. ಬಿಜೆಪಿ ಸರ್ಕಾರ ರಸಗೊಬ್ಬರ ದರವನ್ನು ಒಂದಕ್ಕೆ ನಾಲ್ಕು ಪಟ್ಟು ಏರಿಕೆ ಮಾಡಿ ರೈತರ ಹಿತವನ್ನು ಕಡೆಗಣಿಸಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಖರೀದಿ ಮಾಡಲು ಎಕರೆಗೆ ಹತ್ತು ಸಾವಿರ ನೀಡುತ್ತೇವೆ. ರೈತರು ಸಾಲಗಾರರಾಗಬಾರದು ಎಂಬುದು ನಮ್ಮ ಚಿಂತನೆಯಾಗಿದೆ. ಭೂಮಿಯಿಲ್ಲದ ಕೂಲಿ ಕಾರ್ಮಿಕರಿಗೆ ಪ್ರತಿ ತಿಂಗಳು 15 ಸಾವಿರ ರು. ಆರ್ಥಿಕ ನೆರವು ನೀಡುವಂತಹ ಕಾರ್ಯಕ್ರಮ ಜಾರಿಗೆ ತರುತ್ತೇವೆ. ಯುವಕರಿಗೆ ಉದ್ಯೋಗ ನೀಡುವುದು ಪಂಚರತ್ನ ಯೋಜನೆಯ ಭಾಗವಾಗಿದೆ. ಮನೆಯಿಲ್ಲದವರಿಗೆ ನಿವೇಶನ ನೀಡಿ ಮನೆ ನಿರ್ಮಿಸಿ ಕೊಡುತ್ತೇವೆ ಎಂದರು.

60 ವರ್ಷ ಮೇಲ್ಪಟ್ಟ ತಂದೆ-ತಾಯಿಗಳಿಗೆ ಪ್ರತಿ ತಿಂಗಳು 5 ಸಾವಿರ ರು. ಸಹಾಯ ಧನ ಹಾಗೂ ಅಂಗವಿಕಲರ ಮಾಸಾಶನ 5 ಸಾವಿರ ರೂ.ಗಳಿಗೆ ಏರಿಸಲಾಗುವುದು. ಇದಲ್ಲದೆ ಸ್ತ್ರೀ ಶಕ್ತಿ ಸಂಘಗಳ ಸಾಲವನ್ನು ಅಧಿಕಾರ ಸ್ವೀಕರಿಸಿದ ತಕ್ಷಣವೇ ಮನ್ನಾ ಮಾಡುತ್ತೇವೆ. ಈ ಹಿಂದೆ ನಮ್ಮ ಅಧಿಕಾರದಲ್ಲಿದ್ದಾಗ ರೈತರ ಸಾಲ ಮನ್ನಾ ಮಾಡಿದ್ದರೂ ಕೆಲವರಿಗೆ ಬಿಜೆಪಿ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ. ಅದನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನೀಡಲಾಗುವುದು. ಪಾಟೀಲ ಪುಟ್ಟಪ್ಪನವರ ಜನ್ಮಸ್ಥಳವಾಗಿರುವ ಹಲಗೇರಿ ಗ್ರಾಮದಲ್ಲಿ ಅವರ ಪುತ್ಥಳಿ ನಿರ್ಮಿಸಲಾಗುವುದು.

ಹೊಲಗಳಿಗೆ ರಸ್ತೆ, ಗರಡಿಮನಿ ನಿರ್ಮಾಣ ಮಾಡಲಾಗುವುದು. ಪಂಚರತ್ನ ಯೋಜನೆಗಳ ಜಾರಿಗೆ 2.5 ಲಕ್ಷ ಕೋಟಿ ಹಣ ಬೇಕಾಗುತ್ತದೆ. ಅದಕ್ಕಾಗಿ ನಮ್ಮ ಪಕ್ಷ ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬರುವಂತೆ ಜನರು ಆಶೀರ್ವಾದ ಮಾಡಬೇಕು. ಇದು ಸಾಕಾರವಾಗಲು ಸ್ಥಳೀಯ ಅಭ್ಯರ್ಥಿ ಮಂಜುನಾಥ ಗೌಡಶಿವಣ್ಣನವರ ಅವರಿಗೆ ಮತ ನೀಡಬೇಕು ಎಂದು ಮನವಿ ಮಾಡಿದರು.

ಯಾತ್ರೆಯು ಅಂತರವಳ್ಳಿ, ಆಲದಕಟ್ಟಿ, ಹಾರೋಗೊಪ್ಪ, ನಿಟ್ಟೂರು, ಗೋಡಿಹಾಳ, ಕುಪ್ಪೇಲೂರು, ತುಮ್ಮಿನಕಟ್ಟಿ, ಮಾಳನಾಯಕನಹಳ್ಳಿ, ನಿಟಪಳ್ಳಿ, ಕೋಟಿಹಾಳ, ಹೊಳೆ ಆನ್ವೇರಿ, ಹನುಮನಹಳ್ಳಿ, ಇಟಗಿ, ಮಾಗೋಡ ಗ್ರಾಮಗಳಲ್ಲಿ ಸಂಚರಿಸಿ ನಗರಕ್ಕೆ ಬಂದು ಸೇರಿತು.

ಯಾತ್ರೆಯು ಅಂತರವಳ್ಳಿಗೆ ಆಗಮಿಸಿದಾಗ ಕುಮಾರಸ್ವಾಮಿ ಹೊಲದ ಕೆಲಸದಲ್ಲಿ ನಿರತರಾಗಿದ್ದ ರೈತ ಮಹಿಳೆಯರೊಂದಿಗೆ ಮಾತುಕತೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದರು.

ಮಾಜಿ ಶಾಸಕ ಎಚ್.ಎಸ್.ಶಿವಶಂಕರ್, ಜಿಲ್ಲಾಧ್ಯಕ್ಷ ಜಯಾನಂದ ಜೆ.ಕೆ., ಅಭ್ಯರ್ಥಿ ಮಂಜುನಾಥ ಗೌಡಶಿವಣ್ಣನವರ, ಮಹೇಶ ಹೊನ್ನಜ್ಜೇರ, ಪ್ರವೀಣ ಹೊದ್ದಿಗೇರಿ ಮತ್ತಿತರರಿದ್ದರು.

## ಕೊಲೆ ಪ್ರಕರಣದ ಆರೋಪಿತರ ಬಂಧನ

ದಾವಣಗೆರೆ, ಫೆ. 15- ಇಲ್ಲಿನ ಚೌಡೇಶ್ವರಿ ನಗರದ ಬಿ.ಎಡ್. ಕಾಲೇಜು ಹಿಂಭಾಗದ ರಸ್ತೆಯಲ್ಲಿ ಫೆ. 12 ರಂದು ಸಂಜೆ ನಡೆದ ತಾಲ್ಲೂಕಿನ ಕಿತ್ತೂರು ಗ್ರಾಮದ ಮೈಲಾರಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಲ್ಲೇಶ್, ಶಿವಮೂರ್ತೆಪ್ಪ ಎಂಬುವವರನ್ನು ಬಂಧಿಸಲಾಗಿದೆ.

ಕಿತ್ತೂರಿನ ಶಿವಮೂರ್ತೆಪ್ಪ ಈತನ ಮಗ ಕಿರಣ ಹಾಗೂ ಮಲ್ಲೇಶ್ ಎಂಬುವರು ಶ್ರೀ ಮೈಲಾರ ಲಿಂಗೇಶ್ವರ ದೇವಸ್ಥಾನಕ್ಕೆ ಸೇರಿದ ಮೂರು ಎಕರೆ ಜಮೀನನ್ನು ಸಾಗುವಳಿ ಮಾಡುವ ವಿಚಾರದಲ್ಲಿ ಹಾಗೂ ಕಣದ ಜಾಗದ ವಿಚಾರದಲ್ಲಿ ವೈಷಮ್ಯದಿಂದ ಪಿರ್ಯಾದಿ ಮಗನಾದ ಮೈಲಾರಿಗೆ ಕೈ ಕಾಲುಗಳಿಂದ ಹೊಡೆದು ಚಾಕುವಿನಿಂದ ಚುಚ್ಚಿದ್ದರಿಂದ ಮೈಲಾರಿ ತೀವ್ರ ಗಾಯಗೊಂಡು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ನಿಜಲಿಂಗಪ್ಪ ಬಡಾವಣೆ, ರಿಂಗ್ ರೋಡ್, ಕುಂದವಾಡ ರಸ್ತೆ, ಯಲ್ಲಮ್ಮ ನಗರ, ವಿನೋಬನಗರ 4ನೇ ಮೇನ್, 3ನೇ ಮೇನ್ ಹಾಗೂ ಸುತ್ತ ಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ದರೋಡೆಗೆ ತೆರಳಿದ್ದ ಶ್ರೀರಾಮ ನಗರದ ಯುವಕರು

**ಯುವಕರ ಮೇಲೆ ಲಾರಿ ಹರಿಸಿದ ಚಾಲಕ, ಮೂವರು ದರೋಡೆಕೋರರ ಬಂಧನ**

ದಾವಣಗೆರೆ, ಫೆ.15- ಕಳೆದ ಶನಿವಾರ ಆನಗೋಡು ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಬೈಕ್ ಅಪಘಾತದಲ್ಲಿ ಶ್ರೀರಾಮನಗರದ ಮೂವರು ಮೃತಪಟ್ಟ ಪ್ರಕರಣ ಬೇರೆಯದೇ ತಿರುವು ಪಡೆದುಕೊಂಡಿದೆ.

ಅಂದು ಒಂದು ಬೈಕ್‌ನಲ್ಲಿ ಪರಶುರಾಮ, ನಾಗರಾಜ, ಸಂದೇಶ ಹಾಗೂ ಅವರೊಂದಿಗೆ ಮತ್ತೊಂದು ಬೈಕ್‌ನಲ್ಲಿ ಗಣೇಶ, ರಾಹುಲ್ ಮತ್ತು ಶಿವುಕುಮಾರ ಅವರು ಹೆದ್ದಾರಿಯಲ್ಲಿ ಲಾರಿ ನಿಲ್ಲಿಸಿ ಚಾಲಕನನ್ನು ಹೆದರಿಸಿ ಹಲ್ಲೆ ಮಾಡಿ, ಚಾಲಕನಿಂದ 8 ಸಾವಿರ ರೂ. ನಗದು, ಮೊಬೈಲ್ ಹಾಗೂ ಇತರೆ ವಸ್ತುಗಳನ್ನು ದರೋಡೆ ಮಾಡಿದ್ದಾರೆ. ದರೋಡೆ ಮಾಡಿ ತೆರಳುವಾಗ ಲಾರಿ ಚಾಲಕನು ಬೈಕುಗಳ ಮೇಲೆ ಲಾರಿ ಹತ್ತಿಸಿಕೊಂಡು ಹೋಗಿದ್ದರ ಪರಿಣಾಮ ಒಂದು ಬೈಕಿನಲ್ಲಿ ಹೋಗುತ್ತಿದ್ದ ಪರಶುರಾಮ, ಶಿವಕುಮಾರ ಮತ್ತು ಸಂದೇಶ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಂದು ಬೈಕ್‌ನಲ್ಲಿದ್ದ ಮೂವರಿಗೆ ಗಾಯಗಳಾಗಿವೆ. ಇದೀಗ ಪೊಲೀಸರು ಉಳಿದ ಮೂವರು ದರೋಡೆಕೋರರು ಹಾಗೂ ದರೋಡೆಕೋರರ ಮೇಲೆ ಲಾರಿ ಹತ್ತಿಸಿದ ಚಾಲಕ ಉತ್ತರ ಪ್ರದೇಶದ ಭೋಲೆ ಯಾದವ್ ನನ್ನು ಹಾಗೂ ಲಾರಿಯನ್ನು ಚೆನ್ನೈನಿಂದ ಪತ್ತೆ ಮಾಡಿ ದಸ್ತಗಿರಿ ಮಾಡಿದ್ದು, ನ್ಯಾಯಾಂಗ ಬಂಧನಕ್ಕೆ ಹಾಜರು ಪಡಿಸಲಾಗಿದೆ. ಪ್ರಕರಣ ಬೇಧಿಸುವಲ್ಲಿ ಶ್ರಮಿಸಿದ ಪೊಲೀಸ್ ಇಲಾಖೆ ಅಧಿಕಾರಿಗಳನ್ನು, ಸಿಬ್ಬಂದಿಗಳನ್ನು ಎಸ್ಪಿ ಸಿ.ಬಿ. ರಿಷ್ಯಂತ್, ಹೆಚ್ಚುವರಿ ಎಸ್ಪಿ ರಾಮಗೊಂಡ ಬಿ.ಬಸರಗಿ ಪ್ರಶಂಸಿಸಿದ್ದಾರೆ.














## ಮತ್ತೆ ಟಿಪ್ಪು ವಿಷಯ ಕೆದಕಿದ ಕಟೀಲ್



ಬೆಂಗಳೂರು, ಫೆ. 15 – ಮತ್ತೆ ಟಿಪ್ಪು ಸುಲ್ತಾನ್ ವಿಷಯ ಕೆದಕಿರುವ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಈ ರಾಜ್ಯದಲ್ಲಿ ಟಿಪ್ಪು ಸಂತಾನ ಇರಬೇಕೋ? ರಾಮ ಭಕ್ತಿಯ ಹನುಮ ಭಕ್ತರು ಇರಬೇಕೋ? ಎಂದು ಪ್ರಶ್ನಿಸಿದ್ದಾರೆ.

ಕೊಪ್ಪಳದಲ್ಲಿ ನಡೆದ ವಿಜಯ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ನಾವು ರಾಮ ಭಕ್ತರು, ಆಂಜನೇಯನ ಭಕ್ತರು, ಆಂಜನೇಯನ ಕಾರ್ಯ ಮಾಡುವವರು. ನಾವು ಟಿಪ್ಪು ಸಂತಾನದವರಲ್ಲ, ಟಿಪ್ಪು ಸಂತಾನದವರನ್ನು ಮನೆಗೆ ಕಳುಹಿಸುವವರು ಎಂದು ಹೇಳಿದರು.

ನೀವು ಆಂಜನೇಯನನ್ನು ಪೂಜೆ ಮಾಡುತ್ತೀರಾ ಇಲ್ಲ ಟಿಪ್ಪುವಿನ ಭಜನೆ ಮಾಡುತ್ತೀರಾ? ಹಾಗಾದರೆ ಟಿಪ್ಪು ಭಜನೆ ಮಾಡುವವರನ್ನು ಕಾಡಿಗೆ ಓಡಿಸುತ್ತೀರೋ ಇಲ್ಲವೋ? ಎಂದು ಪ್ರಶ್ನಿಸಿದರು.


**SAPTHAGIRI VIDYALAYA**
Chigateri Layout, Kunduvada Road, Davangere-06
**Required Tutor's**
Subjects : Science, English and Maths
Morning 6 AM to 8 AM | Evening 6 PM to 8 PM
**Required Warden**
2 Post | Male
For more details contact :
9620250067, 9743481884
Send your resume :
sapthagirischooldvg@gmail.com


## ಎರಡನೇ ದಿನವೂ ಬಿ.ಬಿ.ಸಿ. ಶೋಧ

ನವದೆಹಲಿ, ಫೆ. 15 – ಆದಾಯ ತೆರಿಗೆ ಇಲಾಖೆ ಎರಡನೇ ದಿನವೂ ಬಿ.ಬಿ.ಸಿ. ಇಂಡಿಯಾದಲ್ಲಿ ಶೋಧ ಕಾರ್ಯ ನಡೆಸಿದೆ. ಈ ವೇಳೆ ಹಣಕಾಸು ವಿವರಗಳನ್ನು ಸಂಗ್ರಹಿಸಲಾಗಿದೆ.

ದೆಹಲಿ ಹಾಗೂ ಮುಂಬೈಗಳಲ್ಲಿರುವ ಬಿ.ಬಿ.ಸಿ. ಕಚೇರಿಗಳಲ್ಲಿ ಕಾರ್ಯಾಚರಣೆ ನಡೆಸಲಾಗಿದೆ. ಇನ್ನೂ ಕೆಲ ಕಾಲ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.


**9ನೇ ವರ್ಷದ ಪುಣ್ಯಸ್ಮರಣೆ**

ನಿನ್ನೊಲುಮೆ ನಮಗಿರಲಿ ತಂದೆ...



ದಿ|| ಶ್ರೀ ಬಳ್ಳಾರಿ ಎಂ. ಬಸವರಾಜಪ್ಪ
ನೀವು ನಮ್ಮನ್ನಗಲಿ ಇಂದಿಗೆ 9 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿ ಕೋರುವ,
ಶ್ರೀಮತಿ ದೇವೀರಮ್ಮ ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಬಂಧು-ಮಿತ್ರರು, ಕಡ್ಲೆಬಾಳು.
ಮೊ. : 86603 15828



ಶಿವ || ಶ್ರೀ ಮರುಳಸಿದ್ದೇಶ್ವರ ಪ್ರಸನ್ನ || ಶಿವ

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಮರಣ : 05-02-2023

ಹರಪನಹಳ್ಳಿ ತಾಲ್ಲೂಕು ಉ. ಬೇವಿನಹಳ್ಳಿ ಗ್ರಾಮದ ವಾಸಿ ಪಾಟೀಲ್ ಕೆಂಚನಗೌಡ್ರು ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 05-02-2023ನೇ ಭಾನುವಾರ ಮಧ್ಯಾಹ್ನ 3:30 ಗಂಟೆಗೆ ನಮ್ಮ ಮಾತೃಶ್ರೀಯವರಾದ

**ಶರಣೆ ಶ್ರೀಮತಿ ಪಿ.ನಿಂಗಮ್ಮ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
**ದಿನಾಂಕ 17-02-2023ನೇ ಶುಕ್ರವಾರ ಬೆಳಗ್ಗೆ 10-30 ಗಂಟೆಗೆ ಉ.ಬೇವಿನಹಳ್ಳಿ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ನಿರ್ಮಲ, ಶ್ರೀ ಪಾಟೀಲ್ ಕೆಂಚನಗೌಡ್ರು ತಾ.ಪಂ. ಮಾಜಿ ಸದಸ್ಯರು ಉಚ್ಚಂಗಿದುರ್ಗ.
ಶ್ರೀಮತಿ ಇಂದಿರಾ, ಶ್ರೀ ಮಂಜುನಾಥ ಪಾಟೀಲ್, ಅಧ್ಯಕ್ಷರು, ವ್ಯ.ಸೇ. ಸ. ಬ್ಯಾಂಕ್, ಉಚ್ಚಂಗಿದುರ್ಗ.
ಶ್ರೀಮತಿ ಸುಧಾ, ಶ್ರೀ ಶಿವನಗೌಡ ಪಾಟೀಲ್
ಮಗಳು : ಶ್ರೀಮತಿ ಗೌರಮ್ಮ ಮತ್ತು ಅಳಿಯ : ಎನ್.ಎನ್.ಗುರುಬಸವರಾಜು, ಪಲ್ಲಾಗಟ್ಟೆ.
ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು,
ಶ್ರೀ ಮರುಳಸಿದ್ದೇಶ್ವರ ಸ್ಟೋನ್ ಕ್ರಷರ್, ಪಿ.ವಿ.ಜಿ ಸ್ಟೋನ್ ಕ್ರಷರ್ ಹಾಗೂ ಸಿಬ್ಬಂದಿ ವರ್ಗ.
ಲಿಂ|| ಮಲ್ಲಮ್ಮ, ಲಿಂ|| ಪಾಟೀಲ್ ಪರಶುರಾಮನಗೌಡ್ರು ವಂಶಸ್ಥರು, ಗ್ರಾಮಸ್ಥರು, ಉ.ಬೇವಿನಹಳ್ಳಿ,
ಮೊ : 99725 91858, 98443 77222

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



**9ನೇ ವರ್ಷದ ಸವಿನೆನಪು**



**ದಿ|| ಶ್ರೀ ಯರಗಲ್ ಈಶಣ್ಣ**

ಮಾಲೀಕರು : ಪ್ರಿಯದರ್ಶಿನಿ ಅಕ್ಕಿ ಮತ್ತು ಅವಲಕ್ಕಿ ಗಿರಣಿ
ಸಂಸ್ಥಾಪಕರು : ಕನಕ ಪಟ್ಟಣ ಸಹಕಾರಿ ಬ್ಯಾಂಕ್
ಸಂಸ್ಥಾಪಕರು : ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪ್. ಸೊಸೈಟಿ

*ನೀವು ನಮ್ಮನ್ನಗಲಿ ದಿನಾಂಕ 16.02.2023 ಕ್ಕೆ ಒಂಭತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.*

ಪತ್ನಿ : ಶ್ರೀಮತಿ ಜೀವಿಕಾ ಈಶಣ್ಣ ಯರಗಲ್
ಮಗ : ಶ್ರೀಮತಿ ವಾಣಿ ಮತ್ತು ಲೋಹಿತ್ ಯರಗಲ್ ಹಾಗೂ ಮಕ್ಕಳು
ಮಗಳು : ಶ್ರೀಮತಿ ಪ್ರಿಯದರ್ಶಿನಿ ಮತ್ತು ದೀಪಕ್ ಹಾಗೂ ಮಕ್ಕಳು.
ಸಹೋದರ : ಶ್ರೀಮತಿ ಲಲಿತಾ ಮತ್ತು ಬಿ. ವಿಜಯಕುಮಾರ್ ಹಾಗೂ ಮಕ್ಕಳು.



**ಹೃತ್ಪೂರ್ವಕ ಕೃತಜ್ಞತೆಗಳು**





ನಮ್ಮನ್ನು ಜರೀಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಜರೀಕಟ್ಟೆ ಇದಕ್ಕೆ
ಅಧ್ಯಕ್ಷ, ಉಪಾಧ್ಯಕ್ಷೆ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲಾ ನಿರ್ದೇಶಕರುಗಳಿಗೂ, ಊರಿನ ಗ್ರಾಮಸ್ಥರುಗಳಿಗೂ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆಯ್ಕೆಯಾಗಲು ಸಹಕರಿಸಿದವರೆಲ್ಲರಿಗೂ
ಹೃತ್ಪೂರ್ವಕ ಕೃತಜ್ಞತೆಗಳು.

ಎಸ್.ಬಿ ಹನುಮಂತಪ್ಪ,
ಅಧ್ಯಕ್ಷರು
ಜರೀಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಜರೀಕಟ್ಟೆ



ಶ್ರೀಮತಿ ಮಂಜುಳ
ಉಪಾಧ್ಯಕ್ಷರು
ಜರೀಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಜರೀಕಟ್ಟೆ





**ಜನ್ಮದಿನದ ಶುಭಾಶಯಗಳು**



ಇಂದು 50 ವಸಂತಗಳನ್ನು ಪೂರೈಸಿ 51ನೇ ವಸಂತಕ್ಕೆ ಪಾದಾರ್ಪಣೆ ಮಾಡುತ್ತಿರುವ
ದಾವಣಗೆರೆ ಜಿಲ್ಲಾ ಬಿಜೆಪಿ ಎಸ್.ಸಿ. ಮೋರ್ಚಾ ಜಿಲ್ಲಾಧ್ಯಕ್ಷರಾದ
**ಶ್ರೀ ಎನ್. ಹನುಮಂತನಾಯ್ಕ** ಆಲೂರು ಹಟ್ಟಿ
ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte